Swabhimani Sahakari
Pages : 36 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ
Volume - 16
Issue - 7
July- 2019

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



- ವಾರ್ಷಿಕ 5 ಲಕ್ಷ ಆದಾಯ ಇರುವವರಿಗೆ ತೆರಿಗೆ ವಿನಾಯಿತಿ
- ಗೃಹ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ
- 5 ಟ್ರಿಲಿಯನ್ ಆರ್ಥಿಕತೆಗೆ ಯೋಜನೆ
- ದೇಶದ ಎಲ್ಲಾ ಮಹಿಳಾ ಸಂಘಗಳಿಗೆ ಬಡ್ಡಿ ವಿನಾಯಿತಿ ಸಾಲ ಸೌಲಭ್ಯ
- ಶೂನ್ಯ ಬಂಡವಾಳದ ಮೂಲಕ ಕೃಷಿ ಕ್ಷೇತ್ರ ಅಭಿವೃದ್ಧಿ
- ಗ್ರಾಮೀಣ ಕುಡಿಯುವ ನೀರು, ಚರಂಡಿ,ಶೌಚಾಲಯ ನಿರ್ಮಾಣ

## ಕೇಂದ್ರ ಬಜೆಟ್ 2019: ಮಹಿಳೆಯರ ಶ್ರೇಯೋಭಿವೃದ್ಧಿಗೆ 'ನಾರಿ ಟು ನಾರಾಯಣಿ' ಯೋಜನೆ ಜಾರಿಗೆ ನಿರ್ಮಲಾ ಸೀತಾರಾಮನ್ ಘೋಷಣೆ

### ಬಜೆಟ್ ಕೆಲ ವಿಶೇಷತೆಗಳು

* 'ಮುದ್ರಾ' ಯೋಜನೆಯಡಿ ಮಹಿಳಾ ಸಂಘಗಳಿಗೆ 1 ಲಕ್ಷ ರೂಪಾಯಿ ಬಡ್ಡಿ ವಿನಾಯಿತಿ ಸಾಲ ಸೌಲಭ್ಯ.
* ಕೃಷಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಅನ್ನದಾತನನ್ನು ಶಕ್ತಿದಾತನನ್ನಾಗಿ ಮಾಡಲು ಕೃಷಿಕರಿಗೆ ಸೂಕ್ತ ಬೆಲೆ ಮತ್ತು ಮಾರುಕಟ್ಟೆ ವ್ಯವಸ್ಥೆ.
* 3 ಕೋಟಿ ಕಾರ್ಮಿಕರ ಪಿಂಚಣಿಗಾಗಿ 'ಪ್ರಧಾನಮಂತ್ರಿ ಶ್ರಮ್ಯೋಗಿ ಮಾನ್ಧನ್ಸಮ್ಮಾನ್' ಯೋಜನೆ.
* ಉಜ್ವಲ ಯೋಜನೆ ಮತ್ತು ಸೌಭಾಗ್ಯ ಯೋಜನೆ ಅಡಿ ಗ್ರಾಮೀಣ ಪ್ರತಿ ಕಟುಂಬಕ್ಕೆ ಗ್ಯಾಸ್ಮತ್ತು ವಿದ್ಯುತ್ ಸಂಪರ್ಕ.
* ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ ಅಡಿ 2020–21ರ ವೇಳೆಗೆ 1.95 ಕೋಟಿ ಮನೆ ನಿರ್ಮಾಣ.

ಸೌಹಾರ್ದ ಸಹಕಾರಿಗಳ ಸಂಖ್ಯೆ : 4706

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1260



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ದಿನಾಂಕ 18.06.2019 ರಂದು ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಹಾಗೂ ಸಿಬಿಡಿಟಿ ಅಧ್ಯಕ್ಷರನ್ನು ಭೇಟಿಮಾಡಿ ಸಮಸ್ಯೆಗಳ ಬಗ್ಗೆ ಪರಿಹಾರ ಕೋರಲಾಗಿತ್ತು. ನಂತರ ಮತ್ತೆ ದಿನಾಂಕ 29.06.2019ರಂದು ಕೇಂದ್ರದ ಗೃಹ ಸಚಿವರು ಹಾಗೂ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರು ಆಗಿರುವ ಶ್ರೀಯುತ ಅಮಿತ್‌ಷಾರವರನ್ನು ಸಂಯುಕ್ತ ಸಹಕಾರಿಯ ನಿಯೋಗವು ಭೇಟಿ ಮಾಡಿ ಒಂದು ಘಂಟೆಗಳ ಕಾಲ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಬರುತ್ತಿರುವ ನೋಟೀಸುಗಳು, ಆದೇಶಗಳು ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗುವುದಿಲ್ಲ ಎಂಬುದನ್ನು ಮನದಟ್ಟು ಮಾಡಲಾಯಿತು.

# ಸೌಹಾರ್ದ ಸಹಕಾರಿಗಳ ಆದಾಯ ತೆರಿಗೆ ಸಮಸ್ಯೆಗಳ ನಿವಾರಣೆಗೆ ಮುಂದುವರೆದ ಪ್ರಯತ್ನ, ಮತ್ತೊಮ್ಮೆ ಕೇಂದ್ರದ ಹಣಕಾಸು ಸಚಿವರು, ಸಿಬಿಡಿಟಿ ಅಧ್ಯಕ್ಷರು ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಭೇಟಿ ಸಕರಾತ್ಮಕ ಸ್ಪಂದನೆ, ಶೀಘ್ರದಲ್ಲೇ ತೊಂದರೆಗಳ ನಿವಾರಣೆಗೆ ಕ್ರಮದ ಭರವಸೆ.

**ಆತ್ಮೀಯ ಸಹಕಾರಿ ಬಂಧುಗಳೇ,**

ರಾಷ್ಟ್ರದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ಹಿತಚಿಂತಕರಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಕಾರ್ಯನಿರ್ವಹಿಸುತ್ತಿರುವುದು ತಮಗೆಲ್ಲ ತಿಳಿದಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಸಮಸ್ಯೆಗಳ ನಿವಾರಣೆ ಬಗ್ಗೆ ಈಗಾಗಲೇ ಹಲವು ಬಾರಿ ಕೇಂದ್ರ ಹಣಕಾಸು ಸಚಿವರನ್ನು, ಸಿಬಿಡಿಟಿ ಅಧಿಕಾರಿಗಳನ್ನು ಭೇಟಿ ಮಾಡುವ ಸಮಸ್ಯೆಗಳನ್ನು ಅವರ ಅವಗಾಹನೆಗೆ ತರುವ ಮತ್ತು ಅವರಿಂದ ಸಕರಾತ್ಮಕ ಸ್ಪಂದನೆಯನ್ನು ಪಡೆದುಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆದಿದೆ.

ದಿನಾಂಕ 18.06.2019 ರಂದು ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಹಾಗೂ ಸಿಬಿಡಿಟಿ ಅಧ್ಯಕ್ಷರನ್ನು ಭೇಟಿಮಾಡಿ ಸಮಸ್ಯೆಗಳ ಬಗ್ಗೆ ಪರಿಹಾರ ಕೋರಲಾಗಿತ್ತು. ನಂತರ ಮತ್ತೆ ದಿನಾಂಕ 29.06.2019ರಂದು ಕೇಂದ್ರದ ಗೃಹ ಸಚಿವರು ಹಾಗೂ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರು ಆಗಿರುವ ಶ್ರೀಯುತ ಅಮಿತ್‌ಷಾರವರನ್ನು ಸಂಯುಕ್ತ ಸಹಕಾರಿಯ ನಿಯೋಗವು ಭೇಟಿ ಮಾಡಿ ಒಂದು ಘಂಟೆಗಳ ಕಾಲ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಬರುತ್ತಿರುವ ನೋಟೀಸುಗಳು, ಆದೇಶಗಳು ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗುವುದಿಲ್ಲ ಎಂಬುದನ್ನು ಮನದಟ್ಟು ಮಾಡಲಾಯಿತು. ಶ್ರೀಯುತರು ಕೇಂದ್ರ ಹಣಕಾಸು ಸಚಿವರಿಗೆ ನೇರವಾಗಿ ದೂರವಾಣಿ ಮೂಲಕ ಕರ್ನಾಟಕದಲ್ಲಿ 2001 ರಿಂದ ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಕ್ಷೇತ್ರ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ. ಆದಾಯ ತೆರಿಗೆ ಇಲಾಖೆಯಿಂದ ತೊಂದರೆಯಾಗುತ್ತಿರುವ ಬಗ್ಗೆ ಈ ಮೊದಲು ಕೂಡ ಇವರು ಸಮಸ್ಯೆಗಳನ್ನು ತಿಳಿಸಿದ್ದಾರೆ. ಇವರುಗಳಿಗೆ ಸದ್ಯಕ್ಕೆ ಯಾವುದೇ ರೀತಿಯ ಆಡಳಿತಾತ್ಮಕ ತೊಂದರೆಗಳು ಬಾರದಂತೆ ಆದಾಯ ತೆರಿಗೆ ಇಲಾಖೆಯವರು ಕ್ರಮವಿಡಲು ಸೂಚಿಸಿದರು. ಕೇಂದ್ರ ತೆರಿಗೆ ಸಲಹಾ ಮಂಡಲಿ (ಸಿಬಿಡಿಟಿ) ಇವರುಗಳಿಗೆ ಸೂಚನೆ ನೀಡಿ ಸಹಕಾರ ಕ್ಷೇತ್ರಕ್ಕೆ ಅನುಕೂಲವಾಗುವಂತೆ ಆದಾಯ ತೆರಿಗೆ ಕ್ರಮವಿಡುವ ಹಾಗೆ ಈ ಕ್ಷೇತ್ರದ ಅಭಿವೃದ್ಧಿಗೆ ಆದಾಯ ತೆರಿಗೆಯಿಂದ ಹಿನ್ನೆಡೆಯಾಗದಂತೆ, ಯಾವುದೇ ಆಡಳಿತಾತ್ಮಕ ತೊಂದರೆಗಳು ಬಾರದಂತೆ ಕ್ರಮವಿಡಲು ಸೂಚಿಸಿದರು.

ನಿಯೋಗದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕ ಶ್ರೀ ಹೆಚ್.ವಿ.ರಾಜೀವ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ, ಚಿಕ್ಕೋಡಿ ಸಂಸದ ಶ್ರೀ ಅಣ್ಣಾ ಸಾಹೇಬ ಜೊಲ್ಲೆ, ಕೋಲಾರ ಸಂಸದ ಮುನಿಸ್ವಾಮಿ ಹಾಗೂ ನಿಪ್ಪಾಣಿ ಕ್ಷೇತ್ರದ ಶಾಸಕಿ ಶ್ರೀಮತಿ ಶಶಿಕಲಾ ಜೊಲ್ಲೆ ಇವರುಗಳ ಜೊತೆಗೆ ಸಹಕಾರ ಭಾರತೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯ, ಪದಾಧಿಕಾರಿಗಳಾದ ಶ್ರೀ ಉದಯ ಜೋಶಿ, ಇವರಗಳು ಸಹಕಾರ ಕ್ಷೇತ್ರದ ವಿವಿಧ ವಿಭಾಗಗಳ ಸಮಸ್ಯೆಗಳನ್ನೂ ಶ್ರೀಯುತರ ಗಮನಕ್ಕೆ ತರಲಾಯಿತು.

ಕೇಂದ್ರ ಗೃಹ ಸಚಿವ ಹಾಗೂ ಬಿಜೆಪಿ ಅಧ್ಯಕ್ಷರೂ ಆಗಿರುವ ಶ್ರೀಯುತ ಅಮಿತ ಷಾ ರವರು ಕೇಂದ್ರದಲ್ಲಿ ಬಜೆಟ್ ಮಂಡನೆಯಾದ ನಂತರ ಆಗಸ್ಟ್ ಮಾಹೆಯಲ್ಲಿ ಸಮಗ್ರ ಸಹಕಾರ ಕ್ಷೇತ್ರದ ತೊಂದರೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ಪ್ರಯತ್ನವನ್ನು ಕೇಂದ್ರ ಸರಕಾರ ಮಾಡುವುದಾಗಿ ಶ್ರೀಯುತರು ನಿಯೋಗಕ್ಕೆ ತಿಳಿಸಿರುವುದು ಸಹಕಾರಿಗಳಿಗೆ ಸಮಾಧಾನ ಪಡುವ ವಿಷಯವೆಂದು ನಾನು ಭಾವಿಸಿದ್ದೇನೆ. ಸಹಕಾರಿ ಕ್ಷೇತ್ರಕ್ಕೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತೊಂದರೆಗಳ ನಿವಾರಣೆಗೆ ಶೀಘ್ರದಲ್ಲಿಯೇ ಇದಕ್ಕೊಂದು ಶಾಶ್ವತ ಪರಿಹಾರ ನಿರೀಕ್ಷಿಸಬಹುದಾಗಿದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಜ್ಞಾನ ಜ್ಯೋತಿ ................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .. ................................................... 5-25
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ................................................... 26-31
ಲೇಖನ....................................... 32-33
ಆರ್‌ಬಿ.ಐ. ನ್ಯೂಸ್........................ 34-36

# ಸಂಪಾದಕೀಯ

## ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆ – ಶಿಕ್ಷಣದ ಮಹತ್ವ

ಸಹಕಾರ ಕ್ಷೇತ್ರಕ್ಕೆ 115 ವರ್ಷಗಳ ಇತಿಹಾಸ ಸೌಹಾರ್ದ ಸಹಕಾರಿಗಳ ಕ್ಷೇತ್ರಕ್ಕೆ 18 ವರ್ಷಗಳ ಅನುಭವ, ಸಾಂಪ್ರದಾಯಿಕ ಸಂಸ್ಥೆಗಳಿಗಿಂತ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದಾಗಿ ಅಭಿಪ್ರಾಯವಾಗಿದೆ. ಇದಕ್ಕೆ ಪುಷ್ಟೀಕರಣವೆಂಬಂತೆ, ಸೌಹಾರ್ದ ಸಹಕಾರಿ ಸಂಸ್ಥೆಗಳ ವಿಭಿನ್ನ ರೀತಿಯ ಕಾರ್ಯಚಟುವಟಿಕೆಗಳು, ಸದಸ್ಯರಿಗೆ ನೀಡುತ್ತಿರುವ ಹಲವು ಬಗೆಯ ಸೌಲಭ್ಯಗಳು ಸೌಹಾರ್ದ ಸಹಕಾರಿಗಳಲ್ಲಿ ವೃತ್ತಿಪರತೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವುದನ್ನು ಸಾಕ್ಷೀಕರಿಸುತ್ತವೆ. ಈ ರೀತಿಯ ವೃತ್ತಿಪರತೆಯನ್ನು ನೀಡುತ್ತಿರುವ ಶಿಕ್ಷಣ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ.

ಸಂಯುಕ್ತ ಸಹಕಾರಿ ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಹೆಚ್ಚಿನ ರೀತಿಯ ಶಿಕ್ಷಣವನ್ನು ಒದಗಿಸಿ ಅದರಲ್ಲಿ ವೃತ್ತಿಪರತೆಯನ್ನು ಬೆಳೆಸುವಂತೆ ಮಾಡುವುದೇ ಇಂದಿನ ಅವಶ್ಯಕತೆ. ಸಹಕಾರ ಸಂಸ್ಥೆಗಳಲ್ಲಿ ಸದಸ್ಯರು, ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು ಮತ್ತು ಎಲ್ಲ ಸಿಬ್ಬಂದಿಯವರು ತಮ್ಮ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸುವಾಗ ವೃತ್ತಿ ಶಿಕ್ಷಣ ಇದ್ದರೆ ವೃತ್ತಿ ಪರತೆ ಬೆಳೆಯುತ್ತದೆ. ವಿಶೇಷವಾಗಿ ಸಹಕಾರಿ ಸಂಸ್ಥೆಗಳ ಎಲ್ಲಾ ಕಾರ್ಯಚಟುವಟಿಕೆಗಳ ಅವಲೋಕನ ಮಾಡುವ ಸಾಮರ್ಥ್ಯ ಅದರ ಕಾರ್ಯಚರಣೆಗೆ ಸಲಹೆ ನೀಡುವ ಕೌಶಲ್ಯ, ಪರಿಣಾಮಕಾರಿ ನಿರ್ವಹಣೆಯಲ್ಲಿ ಅನುಸರಿಸಬೇಕಾದ ವಿವಿಧ ಹಂತಗಳು ಇವುಗಳನ್ನು ರೂಢಿಸಿಕೊಂಡಾಗ ವೃತ್ತಿಪರತೆ ಬೆಳೆಯುತ್ತದೆ. ಸಹಕಾರಿ ಸಂಸ್ಥೆಗಳು ಆರೋಗ್ಯವಾಗಿ ಬೆಳೆಯುತ್ತವೆ.

ಇಂದಿನ ಪೈಪೋಟಿ ಯುಗದಲ್ಲಿ, ಮುಕ್ತ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರ ಬದುಕುಳಿಯಬೇಕಾದರೆ ಸಹಕಾರ ಸಂಘಗಳಲ್ಲಿ ವೃತ್ತಿಪರತೆಯುಳ್ಳ ಸದಸ್ಯರು, ಆಡಳಿತ ಮಂಡಳಿ, ಅಧ್ಯಕ್ಷರು, ಅಧಿಕಾರಿಗಳ ಪಡೆ ನಿರ್ಮಾಣದಲ್ಲಿ ಸಹಕಾರಿಗಳಾದವರೆಲ್ಲ ತೊಡಗಿಸಿಕೊಳ್ಳುವುದು ಅಗತ್ಯ.



# ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಭಗವತ್ ಶಕ್ತಿ ಸಹಕಾರದ ಪ್ರತೀಕ"

ವಿಶಾಲ ವಿಶ್ವದತ್ತ ನಮ್ಮ ದೃಷ್ಟಿಯನ್ನು ಹಾಯಿಸಿದಾಗ ಸೂರ್ಯೋದಯದ ಸುಂದರ ದೃಶ್ಯ, ಕೋಡುಗಲ್ಲಿನಂತಹ ಪರ್ವತಸ್ತೋಮಗಳ ಮನಸೆಳೆಯುವ ದೃಶ್ಯ, ಮೈದಾಳಿದ ಸಮುದ್ರ, ಪಾತಾಳ ಸದೃಶವಾದ ಪ್ರಪಾತಗಳು ಇತ್ಯಾದಿಗಳು ನಮ್ಮ ಮನಸ್ಸನ್ನು ಸೂರೆಗೈಯುತ್ತವೆ. ಇವುಗಳನ್ನೆಲ್ಲಾ ಸೃಷ್ಟಿಸಿದ ಸೃಷ್ಟಿಕರ್ತನ ಕೈಚಮತ್ಕಾರ ನಮ್ಮನ್ನು ಚಿಂತನೆಯೊಳಕ್ಕೆ ಕರೆದೊಯ್ದು ಇವುಗಳನ್ನು ಮಾಡಿದವನಾರು, ಆ ಪರಮಾದ್ಭುತ ಶಕ್ತಿ ಯಾವುದು ಎಂಬುದರತ್ತ, ಆ ಶಕ್ತಿಗೂ ನಮಗೂ ಇರುವ ಬಾಂಧವ್ಯವೇನು, ನಮ್ಮ ಬದುಕಿನ ಗುರಿಯೇನು, ನಾನು ಈ ಜಗಕ್ಕೆ ಬರುವ ಪೂರ್ವ ಹೇಗಿದ್ದೆ? ಸಾವೆಂಬ ಘಟನೆ ಬಂದು ನನ್ನನ್ನು ಕರೆದೊಯ್ಯುವಾಗ ಯಾವ ಪಾವಿತ್ರ್ಯತೆಯೊಡನೆ ನಾನು ವಾಪಾಸಾಗಬೇಕೆಂಬ ಹಾಗೂ ಐಹಿಕ ಪ್ರಪಂಚದ ಆಕರ್ಷಣೆಗಳ ಮಧ್ಯೆ ಸಿಲುಕಿರುವ ನಾನು ಪಾವಿತ್ರ್ಯತೆಯನ್ನು ಪಡೆಯಬಲ್ಲೆನೆ ಎಂಬ ಪ್ರಶ್ನೆಗಳ ಸುರಿಮಳೆಯೇ ಬಂದು ಬಿಡುತ್ತವೆ.

ಭಗವಂತನ ನೇರ ನಿರ್ದೇಶನದಲ್ಲಿ ಕಾರ್ಯ ನಿರ್ವಹಿಸುವ ಪ್ರಕೃತಿಯ ಚಟುವಟಿಕೆಯಲ್ಲೊಂದಾದ ನವನವೋನ್ಮಾಷಣಾಶಾಲಿ ಗಿಡದ ನೀರು ಹೀರುವಿಕೆ ತನ್ಮೂಲಕ ಚಿಗುರೊಡೆವ ತಳಿರುಗಳ ಮೂಲಕ ನಿತ್ಯ ಹೊಸತನವನ್ನು ಬೀರುವ ಉದಾಹರಣೆಯೊಂದಿಗೆ ಆಧ್ಯಾತ್ಮ ಹಾಗೂ ಪ್ರಕೃತಿಯ ಅರಿವುಳ್ಳ ಕವಿ ಡಿ.ವಿ.ಜಿ.ಯವರು ಗಿಡದ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅದರ ಹಿನ್ನೆಲೆಯಲ್ಲಿ ನಿತ್ಯನೂತನ ಹೊಸತನವನ್ನು ಜಗತ್ತಿಗೆ ನೀಡುವ ದಯಾಮಯಿ ಭಗವಂತನ ಮಹಿಮೆಯನ್ನು ಅರುಹಿದ್ದಾರೆ. ಪದ್ಯದ ವಿನ್ಯಾಸ ಹೀಗಿದೆ:

"ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ ।
ಸಸಿಗೆ ಹೊಸತಳಿರ ತಲೆಯಲಿ ಮುಡಿಸುವಂತೆ ॥
ಹೊಸ ಸೃಷ್ಟಿ ಸತ್ವ ಮೆತ್ತಣೆನೋ ಬರುತನುದಿನಂ ।
ಪೊಸತಾಗಿ ಪುದು ಜಗವ" ॥ಮಂಕುತಿಮ್ಮ॥

ಪ್ರಕೃತಿಯ ಪ್ರಯೋಗ ಶಾಲೆಯಲ್ಲಿ ನಿತ್ಯ ನಡೆಯುತ್ತಿರುವ ಕಾರ್ಯವೆಂದರೆ ಧರೆಯಲ್ಲಿನ ಹೊಸ ಚೈತನ್ಯಶಾಲಿ ರಸವು ಸಸ್ಯಗಳ ಬೇರುಗಳ ಮೂಲಕ ತಲುಪಿ ಅದರ ಕಾಂಡದಲ್ಲೆಲ್ಲಾ ಎಲೆ, ಹೂ ಹಣ್ಣುಗಳನ್ನು ಪಲ್ಲವಿಸುತ್ತದೆ. ಅಂತಹ ಅಗಮ್ಯಚೇತನ ಶಕ್ತಿಯು ಹೊಸ ಸೃಷ್ಟಿಯ ನಿರಂತರ ಶಕ್ತಿಯಾಗಿ, ಜಗತ್ತಿನೆಲ್ಲೆಡೆ ನಿತ್ಯನೂತನತ್ವವನ್ನು ಪಸರಿಸಿ ಜೀವಜಗತ್ತನ್ನು ಅತ್ಯಾಕರ್ಷಣೆಯಿಂದ ಕಾಣಿಸುತ್ತದೆ. ಬೃಹತ್ ಸಿಟಿಗಳ ಮಾರುಕಟ್ಟೆಗೆ ಹೋಗಿ ವೀಕ್ಷಿಸಿದರೆ ಒಂದೊಂದು ದಿನಕ್ಕೆ ಮಾರಾಟಕ್ಕಾಗಿ ಬರುವ ಹೂವು, ಹಣ್ಣುಗಳ ಪ್ರಮಾಣವನ್ನು ಗಮನಿಸಿದರೆ ಇಷ್ಟೊಂದು ಗಾತ್ರದ ಸರಕನ್ನು ಒಂದು ರಾತ್ರಿಯ ಅಂತರದಲ್ಲಿ ಸೃಷ್ಟಿಸಿದ ಮಾಂತ್ರಿಕ ಶಕ್ತಿಯಾವುದೆಂಬ ವಿಸ್ಮಯ ಮೂಡುತ್ತದೆ. ಇಂತಹ ಅಗೋಚರ ಶಕ್ತಿಯನ್ನೇ ದೇವರು, ಭಗವಂತ, ಪರಮೇಶ್ವರ, ನಾರಾಯಣ ಎಂಬ ಹೆಸರುಗಳಿಂದ ಕರೆಯುತ್ತೇವೆ.

ಇಂಥಹ ಸರ್ವ ವ್ಯಾಪಕ ಹಾಗೂ ಅಚಿಂತ್ಯ ಶಕ್ತಿಯ ಅಸ್ತಿತ್ವವನ್ನರಿತು ನಾವೆಲ್ಲರೂ ಆ ಶಕ್ತಿಯ ಮಕ್ಕಳು, ನಾವೆಲ್ಲರೂ ಸೋದರ ಸೋದರಿಯಂತಿರ ಬೇಕೆನ್ನುತ್ತಾ ಇಂತಹ ಭಾವವನ್ನೇ ಪ್ರದರ್ಶಿಸುವ ಸಹಕಾರ ಜೀವನವನ್ನು ಮೈಗೂಡಿಸಿಕೊಳ್ಳೋಣ, ತನ್ಮೂಲಕ ಈ ಭೂ ಉಪಗ್ರಹದಲ್ಲಿ ದ್ವೇಷ, ಅಸೂಯೆ, ಹಿಂಸೆಗಳನ್ನು ದೂರವಾಗಿಸಿ, ಶಾಂತಿ ನೆಮ್ಮದಿ, ಪರಸ್ಪರ ಸ್ನೇಹಭಾವಗಳನ್ನು ತರೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## 6ನೇ ಜುಲೈ 2019 ರಂದು ಅಂತರರಾಷ್ಟ್ರೀಯ ಸಹಕಾರ ದಿನ

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳಲ್ಲಿ ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡಿದ್ದಾರೆ. ಅದರಂತೆ ವಿಶ್ವದಾದ್ಯಂತ ಈ ದಿನದಂದು ಸಹಕಾರಿ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುವಲ್ಲಿ ಸಹಕಾರಿವಾಗುತ್ತವೆ" ಎಂಬುದನ್ನು ದೃಢೀಕರಿಸಲು ಪ್ರತಿ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

## ಸಹಕಾರ ಸಂಸ್ಥೆಗಳಿಗೆ ಆಗುತ್ತಿರುವ ಆದಾಯ ತೆರಿಗೆ ತೊಂದರೆಗಳ ನಿವಾರಣೆಯ ಕುರಿತು ಕೇಂದ್ರದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರ ಭೇಟಿ



**ನವದೆಹಲಿ:** ಸಹಕಾರ ಸಂಸ್ಥೆಗಳಿಗೆ ಆಗುತ್ತಿರುವ ಆದಾಯ ತೆರಿಗೆ ತೊಂದರೆಗಳ ನಿವಾರಣೆಯ ಪ್ರಯತ್ನದ ಮುಂದುವರಿದ ಭಾಗವಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ದಿನಾಂಕ 18.06.2019 ರಂದು ದೆಹಲಿಗೆ ಭೇಟಿ ನೀಡಿ ಮಾನ್ಯ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರನ್ನು ಭೇಟಿ ಮಾಡಿ ವಿಸ್ತೃತವಾಗಿ ಚರ್ಚಿಸಿದರು.

ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ, ಕೇಂದ್ರ ಸಚಿವರಾದ ಶ್ರೀ ಡಿ ವಿ ಸದಾನಂದ ಗೌಡ ಇವರನ್ನು ಹಾಗೂ ಸಿಬಿಡಿಟಿ ಅಧ್ಯಕ್ಷರಾದ ಶ್ರೀ ಪ್ರಮೋದ್ ಚಂದ್ರ ಮೋದಿ ಇವರನ್ನು ಕೂಡ ಭೇಟಿ ಮಾಡಿ ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ತೊಂದರೆ ನಿವಾರಣೆ ಮಾಡುವಂತೆ ಮನವಿ ಮಾಡಲಾಗಿದೆ.

ಈ ಸಂದರ್ಭದಲ್ಲಿ ಮಾನ್ಯ ಸಂಸದರುಗಳಾದ ಶ್ರೀ ಅಣ್ಣಾ ಸಾಹೇಬ್ ಜೊಲ್ಲೆ, ಶ್ರೀ ಮುನಿಸ್ವಾಮಿ, ಶಾಸಕಿ ಶ್ರೀಮತಿ ಶಶಿಕಲಾ ಜೊಲ್ಲೆ, ಹಾಗೂ ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯ ಇವರು ಉಪಸ್ಥಿತರಿದ್ದರು ಹಾಗೂ ದಿನಾಂಕ 19.06.2019 ರಂದು ನಡೆದ ಬಜೆಟ್ ಪೂರ್ವ ಸಭೆಯಲ್ಲಿ ಕೂಡ ಭಾಗವಹಿಸಿ ಸಹಕಾರಿಗಳು ಎದುರಿಸುತ್ತಿರುವ ತೊಂದರೆಗಳ ಬಗ್ಗೆ ಗಮನ ಸೆಳೆಯುವ ಪ್ರಯತ್ನ ಮಾಡಲಾಗಿದೆ. ಈ ಬಗ್ಗೆ ಸಕಾರಾತ್ಮಕ ಸ್ಪಂದನೆ ದೊರೆತಿದ್ದು ಸಮಸ್ಯೆ ನಿವಾರಣೆಯ ವಿಶ್ವಾಸ ಹೊಂದಲಾಗಿದೆ.



ಕೇಂದ್ರದ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ ಇವರಿಗೆ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಆದಾಯ ತೆರಿಗೆ ನಿವಾರಣೆ ಕುರಿತು ಮನವಿ.



ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾದ ಶ್ರೀ ಸದಾನಂದ ಗೌಡ ಇವರಿಗೆ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಆದಾಯ ತೆರಿಗೆ ನಿವಾರಣೆ ಕುರಿತು ಮನವಿ.

## ಸಹಕಾರಿ ಸಂಘಗಳ ನಿಬಂಧಕರಾಗಿ ಶ್ರೀ ಎನ್. ಜಯರಾಮ್



**ಬೆಂಗಳೂರು:** ಸಹಕಾರಿಗಳ ನಿಬಂಧಕರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಎನ್ ಜಯರಾಮ್ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭೇಟಿ ನೀಡಿ ಅಭಿನಂದಿಸಿದರು.

# ಬಜೆಟ್ 2019 : ನಿರ್ಮಲಾ ಸೀತಾರಾಮನ್ ಘೋಷಿಸಿರುವ ಜನಪ್ರಿಯ ಕೆಲ ಪ್ರಮುಖ ಯೋಜನೆಗಳು



**ನವದೆಹಲಿ :** ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಎರಡನೇ ಅವಧಿಯ ಮೊದಲ ಬಜೆಟ್ ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದ ಮಂಡನೆ. ಕೇಂದ್ರ ಸರ್ಕಾರ ಕಳೆದ ಅವಧಿಯಲ್ಲಿ ಎದುರಿಸಿದ್ದ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಿ ಕುಂಠಿತಗೊಂಡಿರುವ ಆರ್ಥಿಕತೆಯನ್ನು ಸಮತೋಲನಕ್ಕೆ ತರುವ ಮಹತ್ವದ ಜವಾಬ್ದಾರಿಯ ಹಿನ್ನೆಲೆಯಲ್ಲಿ ಮೊದಲ ಬಾರಿ ಬಜೆಟ್ ಮಂಡಿಸುತ್ತಿರುವ ನಿರ್ಮಲಾ ಸೀತಾರಾಮನ್ ಅವರು ಘೋಷಿಸಿರುವ ಪ್ರಮುಖ ಜನಪ್ರಿಯ ಯೋಜನೆಗಳ ಕೆಲ ಮಾಹಿತಿಗಳು.

- **ಸರಳ ಪ್ರಕ್ರಿಯೆ :**

ಸರ್ಕಾರದ ಪ್ರಕ್ರಿಯೆಗಳನ್ನು ಸರಳಗೊಳಿಸುತ್ತೇವೆ. ಇದರ ಮೂಲಕ ಸರ್ಕಾರವು ಜನಸಾಮಾನ್ಯರಿಗೆ ಹತ್ತಿರವಾಗಲಿದೆ. ಜನರ ಭಾಗವಹಿಸುವಿಕೆಯೊಂದಿಗೆ ಟೀಮ್ ಇಂಡಿಯಾ ಬಲಗೊಳಿಸಲಾಗುವುದು.

- **5 ಟ್ರಿಲಿಯನ್ ಆರ್ಥಿಕತೆ ಯೋಜನೆ :**

ಭಾರತೀಯ ಆರ್ಥಿಕತೆಯು ಶರವೇಗದಲ್ಲಿ ಬೆಳೆಯುತ್ತಿದ್ದು, ಐದು ವರ್ಷಗಳ ಹಿಂದೆ ಜಾಗತಿಕವಾಗಿ ಭಾರತದ ಆರ್ಥಿಕತೆ 11ನೇ ಸ್ಥಾನದಲ್ಲಿತ್ತು. ಆದರೆ ಪ್ರಸ್ತುತ 5ನೇ ಸ್ಥಾನದಲ್ಲಿದೆ. ಭಾರತವು ಪ್ರಸ್ತುತ ವರ್ಷದಲ್ಲಿಯೇ 3 ಟ್ರಿಲಿಯನ್ ದೇಶವಾಗಲಿದೆ. 5 ಟ್ರಿಲಿಯನ್ ಆರ್ಥಿಕತೆಗೆ ಯೋಜನೆ ರೂಪಿಸಲಾಗಿದೆ.

- **ಉಡಾನ್ ಯೋಜನೆ :**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಇಂಡಸ್ಟ್ರಿಯಲ್ ಕಾರಿಡಾರ್ ಉಡಾನ್ ಸೇರಿದಂತೆ ರೈಲ್ವೆ ಸಂಪರ್ಕ ಕ್ರಾಂತಿ ಆರ್ಥಿಕತೆಗೆ ಉತ್ತೇಜನ ನೀಡಿದೆ. ಮೂಲಸೌಕರ್ಯ, ಡಿಜಿಟಲೀಕರಣಕ್ಕೆ ಕೇಂದ್ರ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಉಡಾನ್ ಯೋಜನೆಯಿಂದ ಜನಸಾಮಾನ್ಯರ ಬದುಕಿಗೆ ಆಶಾಕಿರಣವಾಗಿದೆ.

- **ಉಜ್ವಲ ಮುದ್ರಾ ಯೋಜನೆ :**

ಉಜ್ವಲ ಯೋಜನೆಯಿಂದ ಮಹಿಳೆಯರು ಹೊಗೆ ಮುಕ್ತರಾಗಿದ್ದಾರೆ. ಮುದ್ರಾ ಯೋಜನೆಯ ಫಲವಾಗಿ ಜನಸಾಮಾನ್ಯರ ಜೀವನದಲ್ಲಿ ಮಹತ್ತರ ಬದಲಾವಣೆಯಾಗಿದೆ.

- **ಮೆಟ್ರೋ ಯೋಜನೆ ಹಾಗೂ ರಸ್ತೆಗಳ ಅಭಿವೃದ್ಧಿ :**

ಸುಮಾರು 300 ಕಿ.ಮೀ ಮೆಟ್ರೋ ಯೋಜನೆಗೆ ಅನುಮೋದನೆ ಸಿಕ್ಕಿದೆ. ಭಾರತಮಾಲಾ, ಸಾಗರ ಮಾಲಾ ಯೋಜನೆಗಳ ಮೂಲ ರಸ್ತೆಗಳ ಅಭಿವೃದ್ಧಿ ನಡೆಯಲಿದೆ. ವಿಶೇಷ ಆರ್ಥಿಕ ವಲಯಗಳ ಮೂಲಕ ಅಂತರಾಷ್ಟ್ರೀಯ ಉದ್ಯಮದಾರಿಗೆ ಅವಕಾಶ. ಗಂಗಾನದಿಯಲ್ಲಿ ಒಳನಾಡು ಸಾರಿಗೆಗೆ ಆದ್ಯತೆ ಮೂಲಕ ಜಲ ಮಾರ್ಗ ಯೋಜನೆಗೆ ಒತ್ತು ನೀಡಲಾಗುವುದು.

- **ಉದಯ್ ಯೋಜನೆ :**

ಅಡುಗೆ ಅನಿಲ ಸಾಗಾಟ ಸೌಕರ್ಯಕ್ಕಾಗಿ ಉದಯ್ ಯೋಜನೆ ಘೋಷಣೆ. ಒಂದು ದೇಶ ಒಂದು ಗ್ರೀಡ್ ಯೋಜನೆ ಮೂಲಕ ಪ್ರತಿ ರಾಜ್ಯಗಳಿಗೂ ವಿದ್ಯುತ್ ನ್ನು ಸಮಾನವಾಗಿ ಹಂಚಿಕೆ ಮಾಡಲಾಗುವುದು.

- **ಕರ್ಮಯೋಗಿ ಮಾನ್ ಸಮ್ಮಾನ್ ಯೋಜನೆ :**

ಕರ್ಮಯೋಗಿ ಮಾನ್ ಸಮ್ಮಾನ್ ಯೋಜನೆ ಮೂಲಕ ವ್ಯಾಪಾರಿಗಳಿಗೆ ನೆರವು ನೀಡಲಾಗುವುದು. 3 ಕೋಟಿ ಚಿಲ್ಲರೆ ವ್ಯಾಪಾರಿಗಳಿಗೆ ಪೆನ್ಷನ್ ಯೋಜನೆ ಜಾರಿ, ಇದಕ್ಕಾಗಿ ಕರ್ಮಯೋಗಿ ಮಾನ್ ಸಮ್ಮಾನ್ ಯೋಜನೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 6,091, ಬೆಂಗಳೂರು ವಿಭಾಗದಿಂದ 1380, ಮೈಸೂರು ವಿಭಾಗದಿಂದ 636 ಹಾಗೂ ಕಲಬುರಗಿ ವಿಭಾಗದಿಂದ 1507 ಒಟ್ಟು ದಾಖಲಾದ ದಾವಾ ಪ್ರಕರಣಗಳು 9614 ಆಗಿರುತ್ತದೆ. ಇವುಗಳ ಪೈಕಿ 4,722 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 4,892.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,901 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 199 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1561 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 977 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 80 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 82 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 815 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## “ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಅನೇಕ ವಿಶಿಷ್ಠತೆಯಿಂದ ಕೂಡಿದೆ” – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ



**ಬೆಂಗಳೂರು** : ದಿನಾಂಕ 01.07.2019 ರಿಂದ 07.07.2019 ರವರೆಗೆ ಸೌಹಾರ್ದ ಸಹಕಾರಿ ಪಟ್ಟಣ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಏಳು ದಿನಗಳ “ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್” ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಪ್ರಾರಂಭಿಸಲಾಯಿತು.

ಕಾರ್ಯಕ್ರಮದ ಪ್ರಾರ್ಥನೆಯನ್ನು ಸ್ನೇಹ ಹಾಗೂ ಸೌಂದರ್ಯರವರು ನಡೆಸಿಕೊಟ್ಟರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ನಡೆಸಿಕೊಟ್ಟರು. ಸಂಯುಕ್ತ ಸಹಕಾರಿಯು ಪ್ರತಿ ವರ್ಷ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಏಳು ದಿನಗಳ ಕಾಲ ಬೇಸಿಕ್ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದೆ. ಆದರೆ ಈ ಬಾರಿ ಬ್ಯಾಂಕಿಂಗ್ ತರಬೇತಿ ಕಾರ್ಯಕ್ರಮವನ್ನು ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಅನ್ನಾಗಿ ಪರಿವರ್ತಿಸಲಾಗಿದೆ. ಈ ಕೋರ್ಸ್ ಅನೇಕ ವಿಶೇಷತೆಗಳನ್ನು ಒಳಗೊಂಡಿದ್ದು, ವಿಶೇಷವಾಗಿ ಒಂದು ದಿನದ ತರಬೇತಿಯನ್ನು ಆರ್.ಬಿ.ಐ. ನಲ್ಲಿ ನಡೆಸಲಾಗುತ್ತದೆ. ಅಲ್ಲದೆ ಒಂದು ಪಟ್ಟಣ ಸೌಹಾರ್ದ ಬ್ಯಾಂಕಿನ ಅಧ್ಯಯನ ವ್ಯವಸ್ಥೆಯನ್ನು ಆಯೋಜಿಸಲಾಗಿದೆ. ಕೊನೆಯ ದಿನದಂದು ಪರೀಕ್ಷೆ ನಡೆಸಲಾಗುತ್ತದೆ. ಶಿಬಿರಾರ್ಥಿಗಳಿಗೆ ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುತ್ತದೆ. ಪ್ರತಿಯೊಬ್ಬರೂ ಈ ಕೋರ್ಸ್‌ನ ಉಪಯೋಗವನ್ನು ಪಡೆದುಕೊಳ್ಳಬೇಕು ಅಲ್ಲದೆ ತಾವು ತಮ್ಮ ಬ್ಯಾಂಕಿನಲ್ಲಿ ಇನ್ನು ಹೆಚ್ಚು ಉತ್ತಮವಾಗಿ ಕಾರ್ಯನಿರ್ವಹಿಸಲು ಈ ಕೋರ್ಸ್ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ಎನ್. ದೇಶಪಾಂಡೆ ಹಾಗೂ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಡಾ. ಆರ್.ಇಳಂಗೋವನ್‌ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಯಾದ ಶ್ರೀ ವಿ. ಜೆ. ಕಾರಕೂನರವರು ನಡೆಸಿಕೊಟ್ಟರು. ಈ ಕೋರ್ಸ್‌ನಲ್ಲಿ ಒಟ್ಟು 6 ಸೌಹಾರ್ದ ಸಹಕಾರಿ ಪಟ್ಟಣ ಬ್ಯಾಂಕುಗಳಿಂದ 64 ಸಿಬ್ಬಂದಿಗಳು ಭಾಗವಹಿಸಿದ್ದರು.

## ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ಶಿಬಿರಾರ್ಥಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ತರಬೇತಿ

### ಬ್ಯಾಂಕುಗಳ ವಿಶ್ವಾಸಾರ್ಹತೆಗೆ ಪ್ರಾಮುಖ್ಯತೆ – ಜೋಸ್ ಜೆ. ಕಟ್ಟೂರ್, ಪ್ರಾದೇಶಿಕ ನಿರ್ದೇಶಕರು, ಆರ್.ಬಿ.ಐ



**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಾರಂಭಿಸಿರುವ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ಶಿಬಿರಾರ್ಥಿಗಳಿಗೆ ಒಂದು ದಿನದ ತರಬೇತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಸಭಾಂಗಣದಲ್ಲಿಯೇ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಜೋಸ್ ಜೆ. ಕಟ್ಟೂರ್ ರವರು ಉದ್ಘಾಟಿಸಿದರು. ಶ್ರೀಯುತರು ಮಾತನಾಡುತ್ತಾ ಬ್ಯಾಂಕುಗಳ ವಿಶ್ವಾಸಾರ್ಹತೆಯಿಂದಾಗಿ ಸಾರ್ವಜನಿಕರು ಬ್ಯಾಂಕುಗಳಿಗೆ ಬರುತ್ತಾರೆ. ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವ ಮಹತ್ವದ ಜವಾಬ್ದಾರಿ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಸಿಬ್ಬಂದಿಯವರದ್ದಾಗಿದೆ. ದೇಶದ ಅರ್ಥವ್ಯವಸ್ಥೆಯಲ್ಲಿ ಬ್ಯಾಂಕುಗಳ ಪಾತ್ರ ಮಹತ್ವದ್ದಾಗಿದೆ. ಅದರಂತೆ ಪಟ್ಟಣ ಸಹಕಾರ ಬ್ಯಾಂಕುಗಳಿಗೂ ಹೆಚ್ಚಿನ ಜವಾಬ್ದಾರಿಯಿದೆ. ಆದ್ದರಿಂದ ಸಿಬ್ಬಂದಿಯವರು ಕಲಿಯುವುದನ್ನು ನಿಲ್ಲಿಸಬಾರದು. ವಿಷಯದ ಜ್ಞಾನ ಇಲ್ಲದಿರುವುದು ಹೆಚ್ಚಿನ ಜ್ಞಾನ ಸಂಪಾದನೆಗೆ ಒಂದು ಅವಕಾಶವಿದ್ದಂತೆ. ಎಲ್ಲ ಅವಕಾಶಗಳನ್ನು ಕಲಿಯುವುದಕ್ಕಾಗಿ ಬಳಸಿಕೊಳ್ಳಲು ಕರೆ ನೀಡಿದರು. ಸಿಬ್ಬಂದಿಗಳು ಸದಾ ನಗುಮುಖದ ಸೇವೆಯನ್ನು ನೀಡಬೇಕು. ಗ್ರಾಹಕರನ್ನು ಗೌರವಿಸುವುದನ್ನು ರೂಢಿಸಿಕೊಳ್ಳಬೇಕು. ಬ್ಯಾಂಕಿನ ಸೇವೆಯ ಬಗ್ಗೆ ಯಾವುದೇ ವಿಷಯದ ಬಗ್ಗೆ (ಕಂಪ್ರೂಮೈಸ್) ಹೊಂದಾಣಿಕೆ ಮಿರಬಾರದು. ಪ್ರಾಮಾಣಿಕತೆ ಅತಿ ಮುಖ್ಯ. ಸಿಬ್ಬಂದಿಯವರು ಬ್ಯಾಂಕಿನ ರಾಯಭಾರಿಯಂತೆ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಮುಖ್ಯಸ್ಥ ಶ್ರೀ ಜಮಾಂಗರವರು ಸ್ವಾಗತ ಕೋರಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ರವರು ಮಾತನಾಡಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ರಿಸ್ಕ್ ಇರುವುದು ಸಹಜ ಅದನ್ನು ಮ್ಯಾನೇಜ್ ಮಾಡುವ ಕೌಶಲ್ಯ ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ಹೊಂದಬೇಕು ಎಂದರು ಹಾಗೂ

ಆರ್.ಬಿ.ಐ ಗೆ ಈ ತರಬೇತಿಗೆ ಅವಕಾಶ ಮಾಡಿ ಕೊಟ್ಟಿರುವುದಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಪ್ರವೀಣರವರು ಮಾತನಾಡಿ ಪ್ರಾರಂಭದಲ್ಲಿ ಅದರ ಕಾರ್ಯಚಟುವಟಿಕೆಗಳು ಮತ್ತು ಈ ದೇಶದ ಬ್ಯಾಂಕುಗಳ ಬ್ಯಾಂಕ್ ಆಗಿ ದೇಶದ ಹಣಕಾಸಿನ ನಿರ್ವಹಣೆಗಾಗಿ ನೀಡುತ್ತಿರುವ ಮಾರ್ಗಸೂಚಿಗಳ ಉದ್ದೇಶ, ಅವುಗಳ ಪಾಲನೆಯಲ್ಲಿ ಬ್ಯಾಂಕುಗಳ ಕರ್ತವ್ಯಗಳ ವಿವರಗಳನ್ನು ನೀಡಿದರು. ನಂತರದಲ್ಲಿ ಇನ್ನೊಬ್ಬ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶಿಲ್ಪಿ ಕುಮಾರಿಯವರು ಈ ದೇಶದಲ್ಲಿ ಹಣಕಾಸು ಶಿಸ್ತು ನಿರ್ವಹಣೆಯಲ್ಲಿ ಆರ್.ಬಿ.ಐ ಪಾತ್ರ ಮತ್ತು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಪಾತ್ರದ ಬಗ್ಗೆ ವಿವರಣೆ ನೀಡಿದರು.

ನಂತರದಲ್ಲಿ ಮತ್ತೊಬ್ಬ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ನಿತ್ಯಾಮೋಹನ ರವರು ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸೈಬರ್ ಫ್ರಾಡ್‌ಗಳು ಹೇಗೆ ಆಗುತ್ತದೆ. ಮತ್ತು ಅವುಗಳನ್ನು ಹೇಗೆ ನಿರ್ಬಂಧಿಸಬಹುದು ಮತ್ತು ಸಿಬ್ಬಂದಿಯವರು ಅದರ ಬಗ್ಗೆ ಹೇಗೆ ಎಚ್ಚರಿಕೆ ವಹಿಸಬೇಕು ಎನ್ನುವ ಬಗ್ಗೆ ಉಪನ್ಯಾಸ ನೀಡಿದರು.

### ಆರ್‌ಬಿಐನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ತರಬೇತಿ ವ್ಯವಸ್ಥೆ ಐತಿಹಾಸಕ – ಶ್ರೀ ಜಮಾಂಗ್, ಪ್ರಧಾನ ವ್ಯವಸ್ಥಾಪಕರು, ಆರ್‌ಬಿಐ.

ನಂತರ ಶಿಬಿರಾರ್ಥಿಗಳ ಜೊತೆಗೆ ವಿಚಾರ ವಿನಿಮಯ ನಡೆಸಿದ ಆರ್.ಬಿ.ಐ ನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಪ್ರಧಾನ ವ್ಯವಸ್ಥಾಪಕ ಶ್ರೀ ಜಮಾಂಗ ರವರು ಮಾತನಾಡಿ ಆರ್.ಬಿ.ಐ ನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗೆ ಪ್ರಪ್ರಥಮವಾಗಿ ತರಬೇತಿ ವ್ಯವಸ್ಥೆಯನ್ನು ಮಾಡಿರುವುದು ಐತಿಹಾಸಿಕ ಕ್ರಮ ಇದನ್ನು ಉಪಯೋಗ ಮಾಡಿಕೊಂಡಿರುವ ಸೌಹಾರ್ದ ಫೆಡರಲ್ ನವರಿಗೆ ಅಭಿನಂದಿಸಿತ್ತೇನೆ. ಈ ರಾಜ್ಯದಲ್ಲಿನ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ ಎಲ್ಲ ಸೌಹಾರ್ದ ಬ್ಯಾಂಕುಗಳು ಸಿಬಿಎಸ್ ಅಳವಡಿಸಿಕೊಂಡಿವೆ. ಇನ್ನೂ ಕೆಲವು ಬ್ಯಾಂಕುಗಳು ಉನ್ನತ ಮಟ್ಟದ ತಾಂತ್ರಿಕತೆಯನ್ನು ಅಳವಡಿಸಿಕೊಂಡಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ರವರು ಮಾತನಾಡಿ ಆರ್.ಬಿ.ಐ ನಲ್ಲಿ ತರಬೇತಿ ನಡೆಸಿ ಶಿಬಿರಾರ್ಥಿಗಳಿಗೆ ಉತ್ತಮ ಮಾಹಿತಿಯನ್ನು ಒದಗಿಸಿದ ಹಾಗೂ ಈ ಅವಕಾಶವನ್ನು ಒದಗಿಸಿದ ಆರ್.ಬಿ.ಐ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.




ಆರ್.ಬಿ.ಐ ತರಬೇತಿ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಜಮಾಂಗರವರೊಂದಿಗೆ ಶಿಬಿರಾರ್ಥಿಗಳು

### ಗಾರ್ಡಿಯನ್ ಸೌಹಾರ್ದ ಸಹಕಾರಿ ಬ್ಯಾಂಕ್ ಗೆ ಭೇಟಿ

ನಂತರದಲ್ಲಿ ಶಿಬಿರಾರ್ಥಿಗಳು ನಗರದ ಗಾರ್ಡಿಯನ್ ಸೌಹಾರ್ದ ಸಹಕಾರಿ ಬ್ಯಾಂಕ್ ಗೆ ಭೇಟಿ ನೀಡಿ ಅದರ ಕಾರ್ಯ ಚಟುವಟಿಕೆಗಳ ಅಧ್ಯಯನ ಮಾಡಿದರು. ಗಾರ್ಡಿಯನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಸಿಇಓ ಶ್ರೀಮತಿ ಜೊಸೆಫ್ ಶರೀನ ರವರು ಬ್ಯಾಂಕಿನ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

## ಬೆಂಗಳೂರು ಹಾಗೂ ಬೆಳಗಾವಿಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಮೊದಲನೇ ತಂಡದ ಮೂರನೇ ಸಂಪರ್ಕ ವರ್ಗ ತರಗತಿ ಕಾರ್ಯಕ್ರಮ



**ಬೆಂಗಳೂರು :** ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಮೂರನೇ ಸಂಪರ್ಕ ವರ್ಗ ತರಗತಿಯನ್ನು ದಿನಾಂಕ 8 ಮತ್ತು 9ನೇ ಜೂನ್ 2019ರಂದು ಹಮ್ಮಿಕೊಳ್ಳಲಾಗಿತ್ತು. ದಿನಾಂಕ 8.06.2019ರಂದು ಒಟ್ಟು 99 ಅಭ್ಯರ್ಥಿಗಳು ಭಾಗವಹಿಸಿದ್ದರು ಹಾಗೂ ದಿನಾಂಕ 09.06.2019ರಂದು ಒಟ್ಟು 93 ಅಭ್ಯರ್ಥಿಗಳು ಭಾಗವಹಿಸಿದ್ದರು.

ದಿನಾಂಕ 8 ನೇ ಜೂನ್ 2019ರಂದು ಮೂರನೇ ಸಂಪರ್ಕ ವರ್ಗ ತರಗತಿಯ ಮೊದಲ ತರಗತಿಯನ್ನು ಶ್ರೀ ಹೆಚ್.ಎಸ್.ಸತೀಶ್, ಮಾನ್ಯ ಉಪನ್ಯಾಸಕರು ಬೆಂಗಳೂರು ಇವರು ಸಹಕಾರ ಕಾಯ್ದೆಗಳ ಕುರಿತು ಹಾಗೂ ಸಹಕಾರಿ ಪತ್ತು ನಿರ್ವಹಣೆಯ ಕುರಿತು ಉಪನ್ಯಾಸ ನೀಡಿದರು. ನಂತರದ ಅವಧಿಯನ್ನು ಶ್ರೀ. ಬಿ.ಎಸ್.ಚಂದ್ರಶೇಖರ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು(ನಿ), ಎಸ್.ಬಿ.ಐ. ಇವರು ಬ್ಯಾಂಕಿಂಗ್ ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು. ಭೋಜನ ವಿರಾಮದ ನಂತರ, ಶ್ರೀಮತಿ ಭಾರತಿ, ಮಾನ್ಯ ಅತಿಥಿ ಉಪನ್ಯಾಸಕರು, ಆರ್.ಐ.ಸಿ.ಎಂ. ಇವರು, ಆಡಳಿತ ನಿರ್ವಹಣೆಯ ಕುರಿತು ಅಭ್ಯರ್ಥಿಗಳಿಗೆ ಉಪನ್ಯಾಸ ನೀಡಿದರು.

ದಿನಾಂಕ 9ನೇ ಜೂನ್ 2019ರಂದು ಮೊದಲಿನ ಅವಧಿಯನ್ನು ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಲೆಕ್ಕಪರಿಶೋಧಕರು, ಸಾಗರ ಇವರು ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆಯ ಕುರಿತು ಅಭ್ಯರ್ಥಿಗಳಿಗೆ ಉಪನ್ಯಾಸ

ನೀಡಿದರು. ಭೋಜನ ವಿರಾಮದ ನಂತರ ಶ್ರೀ ರವೀಂದ್ರ.ಜಿ.ಎಸ್. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು(ನಿ), ಎಸ್.ಬಿ.ಐ. ಇವರು ಬ್ಯಾಂಕಿಂಗ್ ಮೂಲ ಮಾಹಿತಿ ಹಾಗೂ ಮಾಹಿತಿ ತಂತ್ರಜ್ಞಾನದ ಕುರಿತು ಅಭ್ಯರ್ಥಿಗಳಿಗೆ ಉಪನ್ಯಾಸ ನೀಡಿದರು.

**ಬೆಳಗಾವಿ :** ಬೆಲ್ಲದ ಬಾಗೇವಾಡಿಯ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇಲ್ಲಿ ಮೂರನೇ ಸಂಪರ್ಕ ವರ್ಗ ತರಗತಿಯನ್ನು ದಿನಾಂಕ 8 ಮತ್ತು 9ನೇ ಜೂನ್ 2019ರಂದು ಹಮ್ಮಿಕೊಳ್ಳಲಾಗಿತ್ತು. ದಿನಾಂಕ 8.06.2019ರಂದು ಒಟ್ಟು 67 ಅಭ್ಯರ್ಥಿಗಳು ಭಾಗವಹಿಸಿದ್ದರು ಹಾಗೂ ದಿನಾಂಕ 09.06.2019ರಂದು ಒಟ್ಟು 66 ಅಭ್ಯರ್ಥಿಗಳು ಭಾಗವಹಿಸಿದ್ದರು.

ದಿನಾಂಕ 8 ನೇ ಜೂನ್ 2019ರಂದು ಮೂರನೇ ಸಂಪರ್ಕ ವರ್ಗ ತರಗತಿಯ ಮೊದಲ ತರಗತಿಯನ್ನು ಶ್ರೀ ಸುನೀಲ ಪತ್ತಾರ, ಮಾನ್ಯ ಲೆಕ್ಕ ಪರಿಶೋಧಕರು, ಜಮಖಂಡಿ. ಇವರು ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು ಹಾಗೂ ಸಹಕಾರಿ ಪತ್ತು ನಿರ್ವಹಣೆಯ ಕುರಿತು ಶ್ರೀ ರಘುನಂದನ ಕೆ. ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ಉಪನ್ಯಾಸ ನೀಡಿದರು. ನಂತರದ ಅವಧಿಯನ್ನು ಶ್ರೀ ಎಸ್.ಜಿ.ಕುಲಕರ್ಣಿ, ಮಾನ್ಯ ಬ್ಯಾಂಕಿಂಗ್ ತಜ್ಞರು, ಇವರು ಬ್ಯಾಂಕಿಂಗ್ ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು. ಭೋಜನ ವಿರಾಮದ ನಂತರ, ಶ್ರೀ ಸಂಗ್ರಾಮ ಕುಲಕರ್ಣಿ, ಮಾನ್ಯ ವಕೀಲರು, ಬೆಳಗಾವಿ, ಇವರು ಸಹಕಾರ ಕಾಯ್ದೆಗಳ ಕುರಿತು ಅಭ್ಯರ್ಥಿಗಳಿಗೆ ಉಪನ್ಯಾಸ ನೀಡಿದರು.

ದಿನಾಂಕ 9ನೇ ಜೂನ್ 2019ರಂದು ಮೊದಲಿನ ಅವಧಿಯನ್ನು ಶ್ರೀ ಸುನೀಲ ಪತ್ತಾರ, ಮಾನ್ಯ ಲೆಕ್ಕಪರಿಶೋಧಕರು, ಇವರು ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆಯ ಕುರಿತು ಅಭ್ಯರ್ಥಿಗಳಿಗೆ ಉಪನ್ಯಾಸ ನೀಡಿದರು. ಭೋಜನ ವಿರಾಮದ ನಂತರ ಶ್ರೀ ಎಸ್.ಜಿ.ಕುಲಕರ್ಣಿ, ಮಾನ್ಯ ಬ್ಯಾಂಕಿಂಗ್ ತಜ್ಞರು, ಇವರು ಬ್ಯಾಂಕಿಂಗ್ ಮೂಲ ಮಾಹಿತಿ ಹಾಗೂ ಮಾಹಿತಿ ತಂತ್ರಜ್ಞಾನದ ಕುರಿತು ಅಭ್ಯರ್ಥಿಗಳಿಗೆ ಉಪನ್ಯಾಸ ನೀಡಿದರು.

## ಒಂದನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಪರೀಕ್ಷೆ ಯಶಸ್ವಿ ಮುಕ್ತಾಯ



**ಬೆಂಗಳೂರು :** 1ನೇ ಜನವರಿ 2019 ರಿಂದ ರಾಜ್ಯದ ಸೌಹಾರ್ದ ಸಹಕಾರಿಗಳ/ಸಹಕಾರಿ ಸಂಸ್ಥೆಗಳ ಹಾಗೂ ಯುವಕರಿಗಾಗಿ 6 ತಿಂಗಳ ದೂರ ಶಿಕ್ಷಣವನ್ನು ಕೋರ್ಸ್‌ನ್ನು ಸಂಯುಕ್ತ ಸಹಕಾರಿಯಿಂದ ಪ್ರಾರಂಭಿಸಲಾಗಿದ್ದು, 181 ಅಭ್ಯರ್ಥಿಗಳು ಪ್ರವೇಶ ಪಡೆದಿದ್ದು ಒಟ್ಟು 166 ಅಭ್ಯರ್ಥಿಗಳು ಪರೀಕ್ಷೆ ಬರೆದರು. ಕೋರ್ಸ್‌ನಲ್ಲಿ ಪ್ರತೀ 2 ತಿಂಗಳಿಗೊಮ್ಮೆ 2 ಸಂಪರ್ಕವರ್ಗ ತರಗತಿಯನ್ನು ನಡೆಸಲಾಗಿದೆ. ಒಟ್ಟು 181 ಅಭ್ಯರ್ಥಿಗಳಲ್ಲಿ ಸಂಪರ್ಕ ವರ್ಗ ತರಗತಿಗಳನ್ನು ಬೆಂಗಳೂರು, ಮೈಸೂರು ಹಾಗೂ ಕಲಬುರ್ಗಿ ಪ್ರಾಂತೀಯ ಕಛೇರಿಗಳ (ಒಟ್ಟು 109) ಅಭ್ಯರ್ಥಿಗಳಿಗಾಗಿ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಹಾಗೂ 72 ಅಭ್ಯರ್ಥಿಗಳಿಗಾಗಿ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು.

ಕೋರ್ಸ್‌ನ ಪರೀಕ್ಷೆಯನ್ನು ದಿನಾಂಕ 21, 22 ಹಾಗೂ 23ನೇ ಜೂನ್ 2019ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಹಾಗೂ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಲ್ಲಿ ಪರೀಕ್ಷೆಯನ್ನು ಆಯೋಜಿಸಲಾಗಿತ್ತು. ದಿನಾಂಕ 21ರಂದು ಬೆಂಗಳೂರಿನಲ್ಲಿ ಒಟ್ಟು 99 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಹಾಗೂ ದಿನಾಂಕ 22 ಹಾಗೂ 23ರಂದು 98 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿಯಲ್ಲಿ ಒಟ್ಟು 68 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

## ವಿಶ್ವ ಯೋಗ ದಿನಾಚರಣೆ

## ಯೋಗದಿಂದ ಸಂಸ್ಕಾರ, ಆರೋಗ್ಯ ಹಾಗೂ ಸ್ವಸ್ಥ ಮಾನಸಿಕತೆ – ಸಂಜಯ ಅಡಿಕೆ

**ಬೆಳಗಾವಿ :** ದಿನಾಂಕ 21.06.2019 ರಿಂದ 23.06.2019 ರವರೆಗೆ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜಮೆಂಟ್ ದೂರ ಶಿಕ್ಷಣ ಕೋರ್ಸಿನ ಪರೀಕ್ಷೆಗಳು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ನಿ., ಬೆಲ್ಲದ ಬಾಗೇವಾಡಿಯಲ್ಲಿ ಜರುಗಿದವು. ಈ ಸಂದರ್ಭದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಒಳ್ಳೆಯ ಸಂಸ್ಕಾರವಂತರಾಗಿರಬೇಕು. ಯೋಗದಿಂದ ಸಂಸ್ಕಾರ ದೊರೆಯುತ್ತದೆ, ಆರೋಗ್ಯ ಸುಧಾರಿಸುತ್ತದೆ, ನಾವು ಹೇಗೆ ಸಂಸ್ಕಾರವಂತರಾಗಿ ಬಾಳಬೇಕೆಂಬುದನ್ನು ತಿಳಿದುಕೊಳ್ಳುವುದೇ ಈ ದಿನದ ವಿಶೇಷ. ಎಂದು

ಯೋಗದ ಕುರಿತು ಹೇಳಿದರು.

ಈ ಯೋಗ ದಿನಾಚರಣೆಯ ನಿಮಿತ್ತ ಮುಖ್ಯ ಅತಿಥಿಗಳಾಗಿ, ಶ್ರೀ ಸಂಜಯ ಅಡಿಕೆ, ಮಾನ್ಯ ಅಧ್ಯಕ್ಷರು, ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಹಾಗೂ ಯೋಗ ಉಪನ್ಯಾಸಕರು, ಇವರು ಯೋಗದಿಂದ ಸಂಸ್ಕಾರ, ಆರೋಗ್ಯ ಲಭಿಸುವ ಹಾಗೂ ಯೋಗದ ಮಹತ್ವವನ್ನು ಈ ಸಂದರ್ಭದಲ್ಲಿ ಹೇಳಿದರು. ಇವತ್ತು ವಿಶ್ವಯೋಗ ದಿನಾಚರಣೆಯ ಐದನೇಯ ವರ್ಷ, ನಾವೆಲ್ಲರೂ ಭಾರತೀಯರು, ಭಾರತ ಮತ್ತು ನಮ್ಮ ಸನಾತನ ಭಾರತೀಯ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದು, ಸಾವಿರಾರು ವರ್ಷದ ಸಂಸ್ಕೃತಿಯ ಪರಂಪರೆಯುಳ್ಳ ದೇಶ ನಮ್ಮ ಭಾರತ. ಜಗತ್ತಿನಲ್ಲಿ ಸರಿಸುಮಾರು 28 ಸಂಸ್ಕೃತಿಗಳು ಅಳಿದು ಹೋದವು. ಗ್ರೀಕರ, ರೋಮನ್ನರ, ಮೆಸೊಪೊಟೊಮಿಯನ್ನರ ಹಾಗೂ ಪರ್ಷಿಯನ್ನರ ಸಂಸ್ಕೃತಿಗಳು ಇತಿಹಾಸದ ಕಾಲಗರ್ಭದಲ್ಲಿ ಮುಳುಗಿಹೋದವು. ಕೆಲವು ಸಂಸ್ಕೃತಿಗಳು 200 ವರ್ಷಗಳವರಗೆ, ಕೆಲವು ಸಂಸ್ಕೃತಿಗಳು 500 ವರ್ಷಗಳವರಗೆ ಹಾಗೂ ಕೆಲವು ಸಂಸ್ಕೃತಿಗಳು 800 ವರ್ಷಗಳ ಕಾಲ ಬದುಕುಳಿದವು ಆದರೆ ಪ್ರಾಚೀನ ಕಾಲದಿಂದಲೂ ಇವತ್ತಿನ ತನಕ ಸುದೀರ್ಘವಾಗಿ ಬದುಕುಳಿದ ಸಂಸ್ಕೃತಿ ಎಂದರೆ ಅದು ನಮ್ಮ ಸನಾತನ ಭಾರತೀಯ ಸಂಸ್ಕೃತಿ. ಅತ್ಯಂತ ವೈಶಿಷ್ಟ್ಯ ಹೊಂದಿದ ಸಂಸ್ಕೃತಿ ನಮ್ಮದು. ಜಗತ್ತಿಗೆ ಬೆಳಕನ್ನು ನೀಡಿದಂತಹ, ಜ್ಞಾನ, ಮಾರ್ಗದರ್ಶನ ನೀಡಿದಂತಹ ಸಂಸ್ಕೃತಿ ನಮ್ಮದು. ಪ್ರಾಚೀನ ಕಾಲದಲ್ಲಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬದುಕುತ್ತಿದ್ದ ಜನರಿಗೆ ಅಗ್ನಿಯ ಬಗ್ಗೆ ಗೊತ್ತಿರಲಿಲ್ಲ, ಅನ್ನ ಬೇಯಿಸುವ ಬಗ್ಗೆ, ಬಟ್ಟೆ ಹಾಕುವ ಬಗ್ಗೆ, ಒಕ್ಕಲುತನ, ಹೀಗೆ ಹಲವಾರು ವಿಷಯಗಳು ಕುರಿತು ಅರಿವು ಇರಲಿಲ್ಲ, ಜನರಿಗೆ ಮನುಷ್ಯನಾಗಿ ಬದುಕುವಂತಹ ಜ್ಞಾನ ಕೊಟ್ಟಿದ್ದೇ ನಮ್ಮ ಭಾಂತ ದೇಶದ ಸಂಸ್ಕೃತಿ. ನಮ್ಮ ಸಂಸ್ಕೃತಿ ಜಗತ್ತಿಗೆ ಅನೇಕ ರೀತಿಯ ಕೊಡುಗೆಗಳನ್ನು ಕೊಟ್ಟಿದೆ. ಪ್ರಾಚೀನ ಕಾಲದ ಋಷಿಮುನಿಗಳೆಂದರೆ ಅವರು ಆಗಿನ ಕಾಲದ ವಿಜ್ಞಾನಿಗಳಾಗಿದ್ದರು, ಒಂದೊಂದು ವಿಷಯದಲ್ಲಿ ತಜ್ಞರಾಗಿದ್ದರು, ಉದಾ: ಅಗಸ್ತ್ಯ ಮುನಿ, ಒಕ್ಕಲುತನದ ಬಗ್ಗೆ ತಿಳಿಸಿಕೊಟ್ಟ ಇವರನ್ನು ದೇಶದ ಮೊದಲನೇಯ ರೈತ ಎಂದು ಹೇಳಬಹುದು, ನಾಗಾರ್ಜುನ ಎಂಬ ಋಷಿಮುನಿಗಳು ರಾಸಾಯನ ಶಾಸ್ತ್ರದಲ್ಲಿ ತಜ್ಞರಾಗಿದ್ದರು. ಆರ್ಯಭಟ, ಸೊನ್ನೆಯನ್ನು ಶೋಧಿಸಿದ ಪ್ರಖ್ಯಾತ ಗಣಿತ ತಜ್ಞ, ಈ ಎಲ್ಲಾ ಸಾಧಕರ ಹಿಂದೆ ಯೋಗಾಭ್ಯಾಸದ ಪರಿಶ್ರಮವಿದೆ. ಪತಂಜಲಿ ಮುನಿಗಳು ಯೋಗದ ಕುರಿತು ದೇಶಕ್ಕೆ ನೀಡಿದ ಕೊಡುಗೆ ಅಭೂತಪೂರ್ವವಾದದ್ದು, ಅವರ ಜೀವನದ ಒಂದು ಮಹತ್ವ ಧ್ಯೇಯ ಎಂದರೆ ಯೋಗ, ಅದರಲ್ಲಿ ಅವರಿಗೆ ತುಂಬಾ ಆಸಕ್ತಿ ಇತ್ತು, ತಮ್ಮ ಇಡೀ ಜೀವನವನ್ನೇ ಯೋಗಾಭ್ಯಾಸಕ್ಕಾಗಿ ಮುಡುಪಾಗಿಟ್ಟರು, ಪತಂಜಲಿ ಮುನಿಗಳು ರಚಿಸಿದ ಯೋಗ ಸೂತ್ರಗಳು, ಯೋಗದ ಕುರಿತು ಬರೆದ ಅನೇಕ ಗ್ರಂಥಗಳು ನಮಗೆ ಮಾದರಿಯಾಗಿವೆ, ಅವರನ್ನು ಯೋಗ ವಿದ್ಯೆಯ ಆದ್ಯಗುರು ಎನ್ನುವರು. ಯೋಗ ಎಂದರೆ ಒಂದು ರೀತಿಯ ಸಾಧನೆ. ಭೂಮಿಯ ಮೇಲೆ ಅನೇಕ ಸಕಲ ಜೀವಿಗಳು ವಾಸಿಸುತ್ತವೆ, ಅವುಗಳಲ್ಲಿ ಮನುಷ್ಯನು ಒಬ್ಬ, ಆತ ಶ್ರೇಷ್ಠ ಜೀವಿ, ಏಕೆಂದರೆ ಆತ ಜ್ಞಾನದ ಉಪಾಸಕ, ಇದು ಮನುಷ್ಯನಿಗೆ ಮತ್ತು ಪ್ರಾಣಿಗಳಿಗೆ ಇರುವ ವ್ಯತ್ಯಾಸ. ಜ್ಞಾನ ಎಂದರೆ ಯೋಗ ಅಥವಾ ಯೋಗಾಭ್ಯಾಸ, ಈ ಯೋಗ ನಮಗೆ ನಿಸರ್ಗದ ಜೊತೆಗೆ ಐಕ್ಯವನ್ನು, ಸಮನ್ವಯವನ್ನು ಮೂಡಿಸುತ್ತದೆ. ನಾವು ನಿಸರ್ಗದ ಪೂಜಕರು. ಯೋಗಾಭ್ಯಾಸ ಎಂದರೆ ನಿಸರ್ಗದ ಜೊತೆಗೆ ಇರುವ ಹೊಂದಾಣಿಕೆ. ಮನುಷ್ಯನ ಶರೀರ ಪಂಚಭೂತಗಳಿಂದ ಮಾಡಲ್ಪಟ್ಟಿದೆ, ಪಂಚಭೂತಗಳು ಮನುಷ್ಯನ ಶರೀರದಲ್ಲಿ ವಾಸ ಮಾಡುತ್ತವೆ, ಈ ಪಂಚ ಭೂತಗಳ ಆಧಾರದ ಮೇಲೆ ಮನುಷ್ಯ ಬದುಕುತ್ತಾನೆ, ದೇಹದೊಂದಿಗೆ ಮನಸ್ಸು ಹೊಂದಾಣಿಕೆಯಾಗಬೇಕಾದರೆ ಯೋಗಭ್ಯಾಸ ಸಹಾಯಕ, ಯಾವುದೇ ಒಂದು ಕ್ರಿಯೆಯಾಗಬೇಕಾದರೆ ಅದರ ಹಿಂದೆ ಚಿಂತನೆ ಅಗತ್ಯ, ಅದಕ್ಕೆ ಯೋಗ ಅಂತ ಕರೆಯುತ್ತೇವೆ. ಮನುಷ್ಯ ತನ್ನ ಜೀವನದಲ್ಲಿ ಮಾಡುವ ಸಾಧನೆಗಳೇ ಯೋಗ ಎಂದು ಹೇಳಬಹುದು. ಮನುಷ್ಯ ತನ್ನ ಜೀವನದಲ್ಲಿ ಒಳ್ಳೆಯ ಮನಸ್ಸಿನಿಂದ ಮಾಡುವ ಕೆಲಸಗಳನ್ನು ಕರ್ಮಯೋಗ ಎಂದು ಕರೆಯುತ್ತೇವೆ. ಅದೇ ರೀತಿ ಯೋಗದ ಇನ್ನೊಂದು ಭಾಗ ಪ್ರಾಣಾಯಾಮ, ಇದರರ್ಥ ದೀರ್ಘಶ್ವಾಸ ತೆಗೆದುಕೊಳ್ಳುವುದು, ಇದರಿಂದ ಮನುಷ್ಯನ ಬದುಕುವ ಅವಧಿ ಹೆಚ್ಚಿಸುತ್ತದೆ. ಮಹಾಭಾರತದ ಒಂದು ಯುದ್ಧ ಪ್ರಸಂಗದಲ್ಲಿ ಕೌರವರ ಅತಿರಥ ಮಹಾರಥರೆಲ್ಲರೂ ಪಾಂಡವರೊಂದಿಗೆ ಯುದ್ಧದಲ್ಲಿ ಸೋತಾಗ, ಕೌರವರ ಮುಖ್ಯಸ್ಥನಾದ ದುರ್ಯೋಧನ, ಕುರುಕ್ಷೇತ್ರದಿಂದ ಪಲಾಯನಗೊಂಡು ಒಂದು ಸರೋವರಕ್ಕೆ ಹೋಗಿ, ಅದರ ಮಧ್ಯಭಾಗದ ಆಳಕ್ಕೆ ಇಳಿದು ಅಲ್ಲಿಯೇ ಕುಳಿತು, ಅನೇಕ ದಿನಗಳ ಕಾಲ ಮೇಲೆ ಬರಲಿಲ್ಲ, ಇದು ಹೇಗೆ ಸಾಧ್ಯ ಎಂದರೆ, ದುರ್ಯೋಧನ ಪ್ರಾಣಾಯಾಮ ತಜ್ಞನಾಗಿದ್ದ, ಹಾಗಾಗಿ ಅವನಿಗೆ ಅನೇಕ ದಿನಗಳ ಕಾಲ ನೀರಿನಲ್ಲಿ ಬದುಕುಳಿಯುವುದು ಸಾಧ್ಯವಾಯಿತು. ಹೀಗೆ ಯೋಗದಿಂದ ಅನೇಕ ಸಾಧನೆಗೈಯಬಹುದು. ಈಗಿನ ಕಾಲದಲ್ಲೂ ಕೂಡ ನಾವು ಅನೇಕ ಯೋಗ ಸಾಧಕರನ್ನು ಕಾಣಬಹುದು. ಇವತ್ತು ಭಾರತೀಯರು ಅನಾದಿ ಕಾಲದಿಂದಲೂ ಪಾಲಿಸುತ್ತಾ ಬಂದ ಯೋಗಾಭ್ಯಾಸವನ್ನು ಇಂದು ಜಗತ್ತು ಅನುಸರಿಸುತ್ತಿದೆ.

ಆದ್ದರಿಂದ ಈಗಿನ ದಿನಮಾನಗಳಲ್ಲಿ ನಾವು ಸದೃಡರಾಗಿ, ಆರೋಗ್ಯವಂತರಾಗಿ ಮತ್ತು ಸುಸಂಸ್ಕೃತರಾಗಿ ಬದುಕಲು ಈ ಯೋಗ ಮಹತ್ವದ ಪಾತ್ರ ವಹಿಸುತ್ತದೆ, ಎಂದು ಯೋಗಾಭ್ಯಾಸದ ಮಹತ್ವವನ್ನು ಅವರು ಹೇಳಿದರು.

ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ. ಇವರು ನೇರವೇರಿಸಿದರು.



ವಿಶ್ವಯೋಗ ದಿನಾಚರಣೆಯ ಸಂದರ್ಭದಲ್ಲಿ ಭಾಗವಹಿಸಿದ ಗಣ್ಯರೊಂದಿಗೆ ಶಿಬಿರಾರ್ಥಿಗಳು

## ಸಮಾರೋಪ ಸಮಾರಂಭ

ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣದ ಪರೀಕ್ಷೆಗಳು ದಿನಾಂಕ 21, 22 ಮತ್ತು 23 ಜೂನ್ 2019 ರಂದು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ, ಇಲ್ಲಿ ಜರುಗಿಸಲಾಯಿತು.

ಕೊನೆಯ ದಿನ ದಿನಾಂಕ 23.06.2019 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ದ ಮಾನ್ಯ ಅಧ್ಯಕ್ಷರಾದ ಡಾ॥ ಎಂ.ಎಸ್.ಮುನ್ನೋಳ್ಳಿ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಬಿ.ಕತ್ತಿ, ಮಾನ್ಯ ನಿರ್ದೇಶಕರುಗಳಾದ ಶ್ರೀ ಆರ್.ಟಿ.ಶಿರಾಳಕರ, ಶ್ರೀ ಎಂ.ಪಿ.ಖೆಮಲಾಪೂರೆ, ಶ್ರೀ ಲವ ಕತ್ತಿ, ಶ್ರೀ ಎಂ.ಎಸ್.ಬೆಲ್ಲದ, ಆಡಳಿತ ಸಲಹೆಗಾರರಾದ ಶ್ರೀ ಎಂ.ಕೆ.ಅಮ್ಮಣಗಿ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸುಜೀತ ಕತ್ತಿ ಹಾಗೂ ಶ್ರೀ ವಿ.ಜೆ ಕಾರಕೂನ, ತರಬೇತಿ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಶ್ರೀ ಶ್ರೀಕಾಂತ್ ಬರುವೆ, ಪ್ರಾಂತೀಯ ವ್ಯವಸ್ಥಾಪಕರು, ಶ್ರೀ ಜಿ.ಎಸ್.ಟೋಪಣ್ಣವರ, ಪರಿವೀಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿಗಳಾದ ಶ್ರೀ ಬಸವರಾಜ ಹೊಂಗಲ, ಶ್ರೀ ಸಂತೋಷ ಬಸಣ್ಣವರ, ಶ್ರೀ ಜವಾಹರ ಮೊಗ್ಗಣ್ಣವರ, ಶ್ರೀಮತಿ ಅಶ್ವಿನಿ ಕಮ್ಮಾರ, ಶ್ರೀಮತಿ ಪ್ರತಿಭಾ ಮಠ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ, ಇವರು ಭಾಗವಹಿಸಿದ್ದರು

ಸಮಾರಂಭವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಪ್ರಾಸ್ತಾವಿಕ ಮತ್ತು ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣ ಕೋರ್ಸ ನಡೆದು ಬಂದ ದಾರಿಯ ಕುರಿತು ವರದಿ ವಾಚನವನ್ನು ಶ್ರೀ ವಿ.ಜೆ ಕಾರಕೂನ, ತರಬೇತಿ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ನೇರವೇರಿಸಿದರು.

ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿಯ ಆಡಳಿತ ಮಂಡಲಿಯವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

ಅದೇ ರೀತಿ ಅನ್ಯ ಶಿಬಿರಾರ್ಥಿಗಳಿಂದ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿಯ ಆಡಳಿತ ಮಂಡಲಿಯವರಿಗೆ ನೆನಪಿನ ಕಾಣಿಕೆ ನೀಡಿದರು.

### ಪರೀಕ್ಷಾರ್ಥಿಗಳ ಅನಿಸಿಕೆ:

**1. ಶಿವಾನಂದ ಕತ್ತಿ (ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ)**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣದ ಕೋರ್ಸ್, ತುಂಬಾ ಉಪಯುಕ್ತವಾದ ಕೋರ್ಸ ಆಗಿದೆ, ಇದರಲ್ಲಿ ಅಳವಡಿಸಿದ ವಿಷಯಗಳು ಸಹಕಾರಿ ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲದೆ, ಬ್ಯಾಂಕಿಂಗ್ ಕ್ಷೇತ್ರಕ್ಕೂ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿವೆ ಹಾಗೂ ಉಪನ್ಯಾಸಕರು ಸಹಿತ ನಮಗೆ ಅರ್ಥೈಸಿಕೊಳ್ಳುವ ಹಾಗೆಯೇ ಹೇಳಿದ್ದಾರೆ. ಈ ಸಂಪರ್ಕ ವರ್ಗಗಳನ್ನು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿಯಲ್ಲಿ ನಡೆಸಿರುವುದಕ್ಕೆ ತುಂಬಾ ಸಹಾಯಕವಾಯಿತು. ನಮ್ಮ ಕಲಿಕಾ ದಿನಗಳು ಪೂರ್ಣಗೊಂಡು ಎಷ್ಟೋ ದಿನಗಳು ಕಳೆದಿತ್ತು, ಈ ಕೋರ್ಸ ಮತ್ತೇ ವಿದ್ಯಾರ್ಥಿ ಜೀವನವನ್ನು ನೆನೆಪಿಸಿಕೊಟ್ಟಿತ್ತು, ಒಂದು ಹೊಸ ಅನುಭವ ನಮಗಾಯಿತು. ಎಂದು ಸಂತೋಷ ವ್ಯಕ್ತಪಡಿಸಿದರು ಮತ್ತು ಈ ಕೋರ್ಸಿನಲ್ಲಿ ಪ್ರವೇಶ ಕೊಡಿಸಿದ್ದಕ್ಕಾಗಿ ತಮ್ಮ ಬ್ಯಾಂಕಿನ ಆಡಳಿತ ಮಂಡಲಿಯವರಿಗೆ ಧನ್ಯವಾದಗಳನ್ನು ಹೇಳಿದರು.

**2. ಶ್ರೀ ಬಾಬು ಅತ್ತಾರ (ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ)**

ಮನುಷ್ಯನಿಗೆ ಜ್ಞಾನ ಎಂಬುದು ದೊಡ್ಡ ಸಂಪತ್ತು, ಅದೃಷ್ಟವನ್ನು ಬದಲಾಯಿಸಲು ಸಾಧ್ಯವಿಲ್ಲ ಆದರೆ ಜ್ಞಾನ ಹೆಚ್ಚಾದಂತೆ ಅದೃಷ್ಟವು ಕೂಡ ಬದಲಾಗುತ್ತದೆ. ಇಂದಿನ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೂಲ ಮಾಹಿತಿಯು ಇಂದಿನ ಜನತೆಗೆ ಅತ್ಯವಶ್ಯಕ, ಅವುಗಳಲ್ಲಿ ಈ ಸಹಕಾರಿ ಹಾಗೂ ಬ್ಯಾಂಕಿಂಗ್ ಕ್ಷೇತ್ರಗಳು ಪ್ರಮುಖ ಪಾತ್ರ ವಹಿಸುತ್ತವೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣದ ಕೋರ್ಸ್‌ನಲ್ಲಿ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿ ನಮಗೆ ಒಳ್ಳೆಯ ಜ್ಞಾನವುಳ್ಳ ಉಪನ್ಯಾಸಕರಿಂದ ದೊರೆತಿದೆ, ಇಂತಹ ಕೋರ್ಸಗಳು ನಡೆಯುವುದರಿಂದ, ಇದರಲ್ಲಿ ಪಾಲ್ಗೋಂಡು ವಿಷಯಗಳನ್ನು ಅರ್ಥೈಸಿಕೊಂಡರೆ ಜ್ಞಾನ ವೃದ್ಧಿಯಾಗುತ್ತದೆ, ಒಟ್ಟಾರೆಯಾಗಿ ಇದು ಒಂದು ಉಪಯುಕ್ತವಾದ ಕೋರ್ಸ ಆಗಿದೆ. ಎಂದು ಹೇಳಿದರು.

**3. ಶ್ರೀಶೈಲ ಚರಾಟ (ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ)**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣದ ಕೋರ್ಸ್‌ನಲ್ಲಿ ಹಲವಾರು ವಿಷಯಗಳನ್ನು ಕುರಿತು ಮಾಹಿತಿ ದೊರಕಿದೆ, ಈ ತರಬೇತಿಯಿಂದ ಪಡೆದ ಜ್ಞಾನವನ್ನು ದಿನನಿತ್ಯದ ನಮ್ಮ ಉದ್ಯೋಗ ವೃತ್ತಿಯಲ್ಲಿ ಅಳವಡಿಸಿಕೊಂಡು ಕೆಲಸ ನಿರ್ವಹಿಸಿದರೆ, ನಾವು ಕೆಲಸ ನಿರ್ವಹಿಸುವ ಸಂಸ್ಥೆಯನ್ನು ಬೆಳೆಸಬಹುದು ಎಂದು ಹೇಳಿದರು ಹಾಗೂ ಈ ಕೋರ್ಸಿನಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟಂತಹ ತಮ್ಮ ಬ್ಯಾಂಕಿನ ಆಡಳಿತ ಮಂಡಳಿಯವರಿಗೆ ಧನ್ಯವಾದಗಳನ್ನು ತಿಳಿಸಿದರು.

**4. ರಾಘವೇಂದ್ರ ಪತ್ತಾರ (ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ)**

ಈ ತರಬೇತಿಯಲ್ಲಿ ನಾವು ಹಲವಾರು ಉಪಯುಕ್ತ ಮಾಹಿತಿಗಳನ್ನು ತಿಳಿದುಕೊಳ್ಳಲು ಸಹಾಯವಾಯಿತು. ಉಪನ್ಯಾಸಕರು ತುಂಬಾ ಚೆನ್ನಾಗಿ ವಿಷಯಗಳ ಕುರಿತು ಉಪನ್ಯಾಸ ನೀಡಿರುತ್ತಾರೆ. ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ. ಈ ಬ್ಯಾಂಕಿನ ವತಿಯಿಂದ ನಮಗೆ ತುಂಬಾ ಸಹಕಾರ ದೊರೆಯಿತು, ಬ್ಯಾಂಕಿನ ಎಲ್ಲಾ ಸಿಬ್ಬಂದಿಗಳು ನಮ್ಮ ಜೊತೆ ತುಂಬಾ ಆತ್ಮೀಯತೆ ಹೊಂದಿದ್ದರು, ಬ್ಯಾಂಕಿನ ವತಿಯಿಂದ ಒಳ್ಳೆಯ ಆತಿಥ್ಯತೆ ದೊರಕಿತು. ಈ ಕೋರ್ಸ ತುಂಬ ಚೆನ್ನಾಗಿ ನಡೆಯಿತು ಎಂದು ಹೆಳಿದರು.

**5. ಗಣಪತಿ ನಾಯ್ಕ (ಸ್ಕೋಡವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಉತ್ತರ ಕನ್ನಡ)**

ನಮ್ಮ ಜೀವನದಲ್ಲಿ ನಾವು ಕಳೆದ ಈ ದಿನಗಳು ತುಂಬಾ ಮಹತ್ವದ

ದಿನಗಳಾಗಿವೆ. ನಾವು ನಮ್ಮ ವಿದ್ಯಾರ್ಥಿ ಜೀವನವನ್ನು ಮುಗಿಸಿ ಉದ್ಯೋಗಸ್ಥರಾದಾಗ ಕಲಿಕೆಯ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡಿರುತ್ತೇವೆ ಆದರೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣದ ಕೋರ್ಸ್ ಮೂಲಕ ತರಬೇತಿಗಳ ಮೂಲಕ ಒಳ್ಳೆಯ ಗುಣಮಟ್ಟದ ಜ್ಞಾನವನ್ನು ಒದಗಿಸುವ ಕೆಲಸ ನಿರಂತರ ಮಾಡುತ್ತಾ ಬಂದಿದೆ. ನಾವು ಈ ಕೋರ್ಸನಲ್ಲಿ ಕಲಿತ ವಿಷಯಗಳು ನಮ್ಮ ವೃತ್ತಿ ಜೀವನದಲ್ಲಿ ಅಷ್ಟೆ ಅಲ್ಲದೇ ದೈನಂದಿನ ಬದುಕಿನಲ್ಲೂ ಸಹಿತ ಉಪಯುಕ್ತವಾಗುತ್ತವೆ. ಅಧ್ಯಯನ ಸಾಹಿತ್ಯ ಕೂಡ ತುಂಬ ಒಳ್ಳೆಯ ಗುಣಮಟ್ಟದಾಗಿದೆ. ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ. ಈ ಬ್ಯಾಂಕಿನವರು ಮಾಡಿದ ವ್ಯವಸ್ಥೆಗಳು ಅವಿಸ್ಮರಣೀಯವಾಗಿದೆ. ಈ ಕೋರ್ಸ್‌ನಿಂದ ದಕ್ಷತೆ, ಗಟ್ಟಿತನವನ್ನು ಹೆಚ್ಚಿಸಿಕೊಂಡಿದ್ದೇವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ಸಂಜೀತ್ ಕತ್ತಿ, ಮಾನ್ಯ ಪ್ರಧಾನ ವ್ಯವಸ್ಥಾಪಕರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ. ಇವರು ಈ ಡಿಸಿಬಿಎಂ ಕೋರ್ಸ್ ಇಷ್ಟರ ಮಟ್ಟಿಗೆ ಒಳ್ಳೆಯ ರೀತಿಯಾಗಿ ಮೂಡಿ ಬರುತ್ತದೆ ಎಂದು ಅಂದುಕೊಂಡಿರಲಿಲ್ಲ, ಪ್ರಾರಂಭದಲ್ಲಿಯೇ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಕೋರ್ಸನಲ್ಲಿ ಅಳವಡಿಸಿರುವ ವಿಷಯಗಳು ಗಮನಾರ್ಹವಾಗಿವೆ, ಪ್ರತಿ ಸಂಪರ್ಕ ತರಗತಿಗಳ ವರ್ಗಕ್ಕೂ ಮಾಡಿದ ಪೂರ್ವ ತಯಾರಿಗಳು, ಉಪನ್ಯಾಸಕರು ತುಂಬ ಅಚ್ಚು ಮೆಚ್ಚು ಎನಿಸಿದೆ. ನಮಗೆ ಬೇಕಾದ ತರಬೇತಿಗಳನ್ನು ಆಯೋಜಿಸಲು ಸದಾ ಸಿದ್ಧರಿದ್ದೇವೆ ಎಂದು ಹೇಳುವ ಸಂಯುಕ್ತ ಸಹಕಾರಿಯ ತಂಡವು ನಮಗೆ ಸಿಕ್ಕದೆ, ಇದು ಹೆಮ್ಮೆಯ ವಿಷಯ. ಈ ಕೋರ್ಸಿನ ವಿಷಯವಾಗಿ ನಮ್ಮ ಬೆಲ್ಲದ ಬಾಗೇವಾಡಿಯಲ್ಲಿಯೇ ತರಗತಿಗಳನ್ನು ನಡೆಸಲು ಒಪ್ಪಿ, ಅದೇ ರೀತಿ ತುಂಬ ವ್ಯವಸ್ಥಿತವಾಗಿ ಆಯೋಜನೆ ಮಾಡಿದ್ದಾರೆ, ಎಂದು ಜೋರಾಗಿ ಚಪ್ಪಾಳೆ ತಟ್ಟುವುದರ ಮೂಲಕ ಸಂಯುಕ್ತ ಸಹಕಾರಿಗೆ ಅಭಿನಂದನೆ ಸಲ್ಲಿಸಿದರು.

**ಡಿಸಿಬಿಎಂ ಕೋರ್ಸ್ ಚೆನ್ನಾಗಿ ನಡೆಸಿದಕ್ಕೆ ಸಂಯುಕ್ತ ಸಹಕರಿಗೆ ಅಭಿನಂದನೆಗಳು – ಶ್ರೀ ಲವ ಕತ್ತಿ,**

ಮುಖ್ಯ ಅತಿಥಿಗಳಾದ ಶ್ರೀ ಲವ ಕತ್ತಿ, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ. ಇವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ದೂರ ಶಿಕ್ಷಣದ ಕೋರ್ಸ್ ಇಷ್ಟು ಚೆನ್ನಾಗಿ ಮೂಡಿ ಬರುತ್ತದೆ ಎಂದು ಅಂದುಕೊಂಡಿರಲಿಲ್ಲ, ತುಂಬ ಅರ್ಥಪೂರ್ಣವಾಗಿ ನಡೆದಿದೆ. ಅಧ್ಯಯನ ಸಾಹಿತ್ಯದಲ್ಲಿ ಅಳವಡಿಸಿದ ವಿಷಯಗಳು ತುಂಬಾ ಅರ್ಥಪೂರ್ಣವಾಗಿವೆ. ಈಗಿನ ಯುವಕರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಆಳವಾದ ಮಾಹಿತಿಯನ್ನು ನೀಡಬೇಕು, ಅವರು ತಮ್ಮನ್ನು ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು. ನಾವು ಕೆಲಸ ಮಾಡುವ ಸಂಸ್ಥೆಗಳ ಇತಿಹಾಸವನ್ನು ತಿಳಿದುಕೊಳ್ಳಬೇಕು, ಅದರ ಕುರಿತು ಸಂಪೂರ್ಣ ಮಾಹಿತಿ ಹೊಂದಿರಬೇಕು. ಅಷ್ಟೇ ಅಲ್ಲದೇ ತಾವು ಕೆಲಸ ಮಾಡುವ ಸಂಸ್ಥೆಯ ವಿಚಾರಗಳನ್ನು, ಮಾಹಿತಿಗಳನ್ನು ತಮ್ಮ ಕುಟುಂಬದವರಿಗೂ ಸಹ ತಿಳಿಸಬೇಕು, ಅವರು ತಾವು ಕೆಲಸ ಮಾಡುವ ಪರಿಸರ ಎಂತಹದು ಎಂದು ತಿಳಿದುಕೊಳ್ಳಬೇಕು.



ಸಂಯುಕ್ತ ಸಹಕಾರಿ ವತಿಯಿಂದ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿಯವರಿಗೆ ಸನ್ಮಾನ ಕಾರ್ಯಕ್ರಮ



ಶಿಬಿರಾರ್ಥಿಗಳಿಂದ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯವರಿಗೆ ನೆನಪಿನ ಕಾಣಿಕೆಯನ್ನು ನೀಡುತ್ತಿರುವುದು.

## ವೋಕೋ ಜಾಗತಿಕ ಸಹಕಾರ ಸಮಾವೇಶಕ್ಕೆ ಶ್ರೀ ಜಗದೀಶ ಕವಟಗಮಠ ಹಾಗೂ ಶ್ರೀ ಶರಣಗೌಡ ಜಿ. ಪಾಟೀಲ

ದಿನಾಂಕ 28 ರಿಂದ 31ರ ಜುಲೈ 2019ರ ವರೆಗೆ ನಡೆಯಲಿರುವ ವಿಶ್ವ ಕ್ರೆಡಿಟ್ ಸಹಕಾರ ಸಂಘಗಳ ಯೂನಿಯನ್ (ವೋಕೋ) ಜಾಗತಿಕ ಮಹಾ ಸಮಾವೇಶದಲ್ಲಿ ಭಾಗವಹಿಸಲು ವೋಕೋ ಸಂಸ್ಥೆಯ ಆಮಂತ್ರಣದ ಮೇರೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ವತಿಯಿಂದ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಬಹಮಾಸ್ ನಗರಕ್ಕೆ ತೆರಳಲಿದ್ದಾರೆ. ವಿಶ್ವ ಮಟ್ಟದ ಸಹಕಾರ ಸಮ್ಮೇಳನದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಗುರುತಿಸಿ ಆಮಂತ್ರಿಸಿರುವ ವಿಶ್ವ ಕ್ರೆಡಿಟ್ ಯೂನಿಯನ್ ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಅಭಿನಂದನೆ ಸಲ್ಲಿಸಿದ್ದಾರೆ.

# "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ-2019 ಮತ್ತು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಲು ದಾವಾ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ" ಕುರಿತು ತರಬೇತಿ ಕಾರ್ಯಕ್ರಮ



## ಸಹಕಾರಿಗಳು ಗುಣಮಟ್ಟದ ಠೇವಣಿ ಯೋಜನೆ ಅಳವಡಿಸಿಕೊಳ್ಳಲಿ - ಗುರುನಾಥ ಜ್ಯಾಂತಿಕರ

**ಬೀದರ :** ಬೀದರ ನಗರದ ಸಹಾರ್ದ ತರಬೇತಿ ಸಂಸ್ಥೆ ನೌಬಾದ ಬೀದರ ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು. ಪ್ರಾಂತೀಯ ಕಛೇರಿ ಕಲಬುರಗಿ ಇದರ ನೇತೃತ್ವದಲ್ಲಿ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ ಬೀದರ ಇದರ ಸಹಯೋಗದೊಂದಿಗೆ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರುಗಳಿಗೆ ಒಂದು ದಿನದ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ-2019 ಮತ್ತು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಲು ದಾವಾ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ" ಕುರಿತು ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರನಾಥ ಜ್ಯಾಂತಿಕರ ಇವರು ಉದ್ಘಾಟಿಸಿ ಮಾತನಾಡಿದರು. ಸಹಕಾರಿ ಕ್ಷೇತ್ರಕ್ಕೆ 115 ವರ್ಷದ ಇತಿಹಾಸ ಇದೆ ಹುಟ್ಟಿನಿಂದ ಸಾಯುವ ವರೆಗೆ ಸಹಕಾರಿ ನಮ್ಮ ಜೀವನದಲ್ಲಿ ಹಾಸೂಹೊಕ್ಕಿದೆ. ದೇಶದಲ್ಲಿ ಹಾಲಿನ ಕ್ರಾಂತಿಗೆ ಸಹಕಾರಿ ರಂಗದ ಕೊಡುಗೆ ಅಪಾರವಾಗಿದೆ ಎಂದರು ಸಹಕಾರಿಗಳಾದ ತಾವು ಸದಸ್ಯರ ಹಿತದೃಷ್ಟಿಯಿಂದ ಬಡ್ಡಿದರಗಳನ್ನು ನಿಗದಿ ಪಡಿಸಿಕೊಳ್ಳುವಂತೆ ಹೆಚ್ಚಿನ ಬಡ್ಡಿಗೆ ಆಮಿಷ ನೀಡದೆ ಗುಣಮಟ್ಟದ ಠೇವಣಿ ಮತ್ತು ಸಾಲಗಳನ್ನು ನೀಡುವಂತೆ ಸಲಹೆ ನೀಡಿದರು. ಸಹಕಾರಿ ಸಂಸ್ಥೆಗಳು ಸಾಲ ವಸೂಲಾತಿ ಕ್ರಮಗಳನ್ನು ನಿರ್ವಹಿಸುವ ಮೂಲಕ ಸಹಕಾರಿಗಳನ್ನು ರಕ್ಷಿಸಬೇಕಾಗಿದೆ ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ತರಬೇತಿಯು ಸಹಕಾರಿಯಾಗಲಿದೆ ಎಂದು ನುಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ಮಾತನಾಡಿ ಸಹಕಾರಿಗಳು ದೈನಂದಿನ ಚಟುವಟಿಕೆಯಲ್ಲಿ ಅನೇಕ ಸಮಸ್ಯೆಗಳು ಎದುರಿಸುತ್ತಿವೆ ಅವುಗಳ ಪರಿಹಾರಕ್ಕೆ ಈ ತರಬೇತಿ ವೇದಿಕೆಯಾಗಲಿದೆ ಎಂದು ನುಡಿದರು. ಸಂಯುಕ್ತ ಸಹಕಾರಿ ಹಾಗೂ ಜಿಲ್ಲಾ ಒಕ್ಕೂಟ ನಿರಂತರ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಂಡಿದೆ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ನಿರ್ದೇಶಕರಾದ ಶ್ರೀ ಶಿವಬಸಪ್ಪ ಚನ್ನಮಲ್ಲೆ ಸಹಕಾರಿ ಚಟುವಟಿಕೆಯ ಜೊತೆ ಸಾಮಾಜಿಕ ಹಾಗೂ ಪರಿಸರ ಸಂರಕ್ಷಣ ಕಾರ್ಯಗಳು ಸಹಕಾರಿ ವತಿಯಿಂದ ಕೈಗೊಳ್ಳುವಂತೆ ಸಲಹೆ ನೀಡಿದರು. ನಮ್ಮ ಜಿಲ್ಲೆಯಲ್ಲಿ ರಸ್ತೆಗಳ ಅಭಿವೃದ್ಧಿ ಹೆಸರಲ್ಲಿ ಮರಗಳ ಮಾರಣಹೋಮ ಮಾಡಿ ಪರಿಸರ ನಾಶಮಾಡಿದ್ದೇವೆ. ಸಹಕಾರಿಗಳಾದ ತಾವು ಗ್ರಾಮಗಳಲ್ಲಿ ಮರಗಳನ್ನು ಬೆಳೆಸುವಂತೆ ಮನವಿ ಮಾಡಿದರು. ಇಂದಿನ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಶ್ರೀಕಾಂತ ಬರುವೆ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ-2019 ಕುರಿತು ಉಪನ್ಯಾಸ ನೀಡಿದರು. ಇನ್ನೂರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಧರ ಆರ್ ಅವರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಲು ದಾವಾ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಕುರಿತು ತರಬೇತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಪ್ರಾಸ್ತಾವಿಕ ಮತ್ತು ಸ್ವಾಗತಿಸಿದರು. ಕಾನೂನು ಅಧಿಕಾರಿ ಸೂರ್ಯಕಾಂತ ರಾಕ್ಕಲೆ, ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಕ್ರಾಂತಿಕುಮಾರ ಕುಲಾಲ, ಸಂಜಯ ಕ್ಯಾಸಾ, ಶಿವಾನಂದ ಮಂಠಾಳಕರ್, ಸತೀಷ ಪಾಟೀಲ್, ರಾಜಶೇಖರ ನಾಗಮೂರ್ತಿ, ಜಗನಾಥ ಕರಂಜೆ, ಶ್ರೀಕಾಂತ ಸ್ವಾಮಿ, ಶ್ರೀಮತಿ ಮಾಯಾದೇವಿ ಸಿಂದನಕೆರಾ, ಸವಿತಾ ಜಿ.ಕೆ ಒಕ್ಕೂಟ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದರು. ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ನಿರೂಪಿಸಿ, ವಂದಿಸಿದರು. ಜಿಲ್ಲೆಯ 56 ಸೌಹಾರ್ದ ಸಹಕಾರಿಗಳಿಂದ 88 ಸಹಕಾರಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು



**ಕಲಬುರಗಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಚೇಂಬರ್ ಆಫ ಕಾಮರ್ಸ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟಕರಾಗಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ವಹಿಸಿಕೊಂಡಿದರು. ಅದೇ ರೀತಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಾಯ್ ಟಿ ಪಾಟೀಲರವರು ಹಾಗೂ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿರವರು ಮತ್ತು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿರ್ದೇಶಕರಾದ ಶ್ರೀ ಎಸ್.ಎಸ್.ಪಾಟೀಲರವರು ಹಾಗೂ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಧರ, ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ.ಹೆಚ್ ರವರು, ಕಾನೂನು ವ್ಯವಸ್ಥಾಪಕರು ಶ್ರೀ ಸೂರ್ಯಕಾಂತ ರ‍್ಯಾಕಲೇರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ರಾಜಶೇಖರ. ಹೆಚ್ ರವರು ಸ್ವಾಗತವನ್ನು ಕೋರಿದರು. ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಮಾತನಾಡುತ್ತಾ ಸಂಯುಕ್ತ ಸಹಕಾರಿಯು ಆಯೋಜಿಸಿರುವ ತರಬೇತಿ ಕಾರ್ಯಕ್ರಮಗಳನ್ನು ಸಹಕಾರಿಗಳು ಶಾಸನಬದ್ದ ಕಾರ್ಯಗಳ ಅವಲೋಕನ ಮಾಡಲು ಈ ತರಬೇತಿ ಕಾರ್ಯಕ್ರಮಗಳು ಅನುಕೂಲಕರವಾಗಿದೆ. ಈ ರೀತಿ ಪಾಲ್ಗೋಳುವುದರಿಂದ ಸಹಕಾರಿ ಸಂಸ್ಥೆಗಳು ಉತ್ತಮ ದಿಸೆಯಲ್ಲಿ ಸಾಗಲು ಅನವು ಆಗುತ್ತದೆ. ಒಂದು ಸಹಕಾರಿ ಉತ್ತಮವಾಗಿ ಬೆಳವಣಿಗೆಯಾಗಲು ಮುಖ್ಯ ಕಾರ್ಯನಿರ್ವಾಹಕರ ಪಾತ್ರ ಮಹತ್ವ ಎಂದು ತಿಳಿಸಿದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಉದ್ಘಾಟಣಾ ಭಾಷಣದಲ್ಲಿ ದೇಶಾದ್ಯಂತ ಸಾರ್ವಜನಿಕರಿಂದ ಅಪಾರ ಮೊತ್ತದ ಠೇವಣಿ ಪಡೆದು ವಂಚನೆ ಮಾಡಿ ದೇಶ ಬಿಟ್ಟು ಓಡಿ ಹೋಗುವ ಪ್ರಕರಣಗಳು ಹೆಚ್ಚಾಗಿವೆ. ಇಂತಹ ಬೆಳವಣಿಗೆಯನ್ನು ಕೇಂದ್ರ ಸರಕಾರ ಗಂಭಿರವಾಗಿ ಪರಿಗಣಿಸಿದೆ ಎಂದರು ಆಡಳಿತ ಮಂಡಳಿ ಸದಸ್ಯರು ಸಹಕಾರ ಸಂಸ್ಥೆಯ ಮಾಲಿಕರಾಗಿರುವುದಿಲ್ಲ ಸದಸ್ಯರ ಹಣದ ಕಾವಲುಗಾರರು ಎಂದು ತಿಳಿಸಿದರು. ಸಾಲ ವಿತರಣೆ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಸಿಬ್ಬಂದಿ ಮೇಲೆ ಒತ್ತಡ ಹೇರಬಾರದು ಇದರಿಂದ ಸಹಕಾರಿ ಸಂಸ್ಥೆ ಅವನತಿಯತ್ತ ಸಾಗುತ್ತದೆ ಎಂದು ತಿಳಿಸಿದರು. ಸಹಕಾರಿಗಳಿಗೆ ಸಾಲ ನೀಡುವ ಸಂದರ್ಭದಲ್ಲಿ ಸಿಬ್ಬಂದಿಗಳು ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಪಡೆದಕೊಳ್ಳಬೇಕು. ನಿಗದಿತ ಸಮಯದಲ್ಲಿ ಸಾಲ ಮರುಪಾವತಿ ಮಾಡದಿದ್ದಲಿ ಅವರ ವಿರುದ್ದ ದಾವೆ ಹೂಡಬಹುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಾಯ್ ಟಿ. ಪಾಟೀಲರವರು ಮಾತನಾಡುತ್ತಾ ಸಂಯುಕ್ತ ಸಹಕಾರಿ ಹಮ್ಮಿಕೊಳ್ಳುವ ಎಲ್ಲಾ ತರಬೇತಿ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು ಮತ್ತು ಅದರ ಲಾಭವನ್ನು ತಾವು ಎಲ್ಲರೂ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆರವರು, ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದ ಸಹ ಪ್ರಧಾನ ವ್ಯವಸ್ಥಾಪಕರು ಶ್ರೀ ಶ್ರೀಧರರವರು ಮತ್ತು ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೇರವರು ಉಪಸ್ಥಿತರಿದ್ದರು. ತರಬೇತಿ ಕಾರ್ಯಕ್ರಮದ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಕಲಬುರಗಿ ಜಿಲ್ಲಾ ಸಂಯೋಜಕರಾದ ಓಂಕಾರ ಧರಣೆರವರು ನಡೆಸಿಕೊಟ್ಟರು ಹಾಗೂ ವಂದನಾರ್ಪಣೆಯನ್ನು ಕಲಬುರಗಿ ಪ್ರಾಂತೀಯ ಕಛೇರಿಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೇರವರು ಇವರು ನಡೆಸಿಕೊಟ್ಟರು. ಮೊದಲನೇ ಅವಧಿಯಲ್ಲಿ ಶ್ರೀ ಶ್ರೀಕಾಂತ ಬರುವೆರವರು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ–2019ರ ಬಗ್ಗೆ ತಿಳಿಸಿದರು. ನಂತರ ಸಂವಾದ ಕಾರ್ಯಕ್ರಮವು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ವೇಳೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು, ಶ್ರೀ ವಾಯ್ ಟಿ.ಪಾಟೀಲರವರು, ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಮಲ್ಲಿಕಾರ್ಜುನ ಮಹಾಂತಗೋಳ್, ಮತ್ತು ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆರವರು, ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರು ಶ್ರೀ ರಾಜಶೇಖರ.ಹೆಚ್ ರವರು ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರರವರು, ಮತ್ತು ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೇರವರು ಉಪಸ್ಥಿತರಿದ್ದರು. ಅನಿಯಂತ್ರಿತ ಠೇವಣಿಯ ಬಗ್ಗೆ ಸಹಕಾರಿಗಳಿಗೆ ಆಗುವ ಲಾಭ ಮತ್ತು ಪರಿಣಾಮಗಳಿಗೆ ಸುದೀರ್ಘವಾಗಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳ ಜೊತೆ ಚರ್ಚಿಸಲಾಯಿತು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 75 ಸೌಹಾರ್ದ ಸಹಕಾರಿಗಳಿಂದ 102 ಸದಸ್ಯರು ಭಾಗವಹಿಸಿದರು.



**ಚಾಮರಾಜನಗರ :** ದಿನಾಂಕ 11.06.2019ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗೆ ದಾವಾ ಪಂಚಾಯಿತಿ ಹಾಗೂ ಸಾಲ ವಸೂಲಾತಿ" ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಯಸಿಂಹ, ಅಧ್ಯಕ್ಷರು ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಚಾಮರಾಜನಗರ ಇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ರೂಪಾಶ್ರೀ, ವಕೀಲರು ಹಾಗೂ ನೋಟರಿ, ಚಾಮರಾಜನಗರ ಹಾಗೂ ತರಬೇತಿದಾರರಾಗಿ ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಇವರುಗಳ ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾದ ಶ್ರೀಮತಿ ರೂಪಾಶ್ರೀರವರು ಮಾತನಾಡಿ ಸದರಿ ತರಬೇತಿಯು ಸಿಬ್ಬಂದಿಗಳಿಗೆ ಅಗತ್ಯವಾದ ಜ್ಞಾನವನ್ನು ನೀಡಲು ಸಹಕಾರಿಯಾಗಿದೆ ಎಂದು ತಿಳಿಸುತ್ತಾ ಸಹಕಾರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ನ್ಯಾಯಾಲಯಗಳಲ್ಲಿ ಸಾಲ ಪಡೆದ ಸದಸ್ಯರುಗಳು ನೀಡಿರುವ ಚೆಕ್ ಬೌನ್ಸ್ ಆದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ವಿವರವಾಗಿ ತಿಳಿಸಿಕೊಟ್ಟರು. ನಂತರ ಸಿಬ್ಬಂದಿಗಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

ತರಬೇತಿಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಜಯಸಿಂಹರವರು ಮಾತನಾಡಿ ಸಹಕಾರಿಗಳ ಸಿಬ್ಬಂದಿಗಳು ಸದರಿ ತರಬೇತಿಗಳ ಉಪಯೋಗವನ್ನು ಪಡೆದು ಸದಸ್ಯರುಗಳಿಗೆ ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ ಅಗತ್ಯವಾದ ದಾಖಲೆಗಳನ್ನು ಪಡೆಯುವುದು ಹಾಗೂ ಪರಿಶೀಲಿಸುವುದನ್ನು ತುಂಬಾ ಗಮನವಹಿಸಿ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿ, ಸುಸ್ತಿಯಾದ ಸದಸ್ಯರ ಸಾಲ ವಸೂಲಾತಿಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿ ತಿಳಿಸಿದರು.

ಸದರಿ ತರಬೇತಿಯಲ್ಲಿ 03 ಸಹಕಾರಿಗಳ ಅಧ್ಯಕ್ಷರುಗಳು ಹಾಗೂ 12 ಸಹಕಾರಿಗಳಿಂದ 16 ಸಿಬ್ಬಂದಿಗಳು ಒಟ್ಟು 22 ಜನರು ಹಾಜರಿದ್ದರು.

ಸದರಿ ತರಬೇತಿಯನ್ನು ಕುಮಾರಿ ರಮ್ಯ ನಿರೂಪಿಸಿದರು, ಪ್ರಾರ್ಥನೆಯನ್ನು ಶ್ರೀ ಪದ್ಮನಾಭ ರವರು ನಡೆಸಿಕೊಟ್ಟರು. ಶ್ರೀ ಲಿಂಗರಾಜು ಸ್ವಾಗತಿಸಿ, ಶ್ರೀ ಉಮೇಶ ರವರು ವಂದಿಸಿದರು.



**ದಕ್ಷಿಣ ಕನ್ನಡ :** ದಿನಾಂಕ 19.06.2019ರಂದು ಮಂಗಳೂರಿನ ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ 01 ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದಲ್ಲಿ 65 ಸೌಹಾರ್ದ ಸಹಕಾರಿಗಳಿಂದ 87 ಪ್ರತಿನಿಧಿಗಳು ಭಾಗವಹಿಸಿದ್ದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಡಾ. ಸುರೇಶ್ ಗೌಡ ನೇರವೇರಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶ್ರೇಯಸ್ ಕೆ.ಎಂ, ಡೆಪ್ಯೂಟಿ ಕಮೀಷನರ್, ಸೆಂಟ್ರಲ್ ಕಸ್ಟಮ್ಸ್ & ಜಿ.ಎಸ್.ಟಿ, ಶ್ರೀ ಅನೂಪ್ ದೇಶಪಾಂಡೆ, ವಕೀಲರು, ಧಾರವಾಡ, ಶ್ರೀ ಎ.ಸುರೇಶ್ ರೈ, ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ನಿ., ಮಂಗಳೂರು ಇವರುಗಳು ಭಾಗವಹಿಸಿದ್ದರು.

ಉದ್ಘಾಟನೆಯನ್ನು ನೇರವೇರಿಸಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಡಾ. ಸುರೇಶ್ ಗೌಡ ಇವರು ಸಹಕಾರಿ ಸಂಸ್ಥೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ತರಬೇತಿ ಕಾರ್ಯಕ್ರಮದ ಅವಶ್ಯಕತೆ ಇದೆ. ಸಿಬ್ಬಂದಿಗಳು ತರಬೇತಿ ಪಡೆದು ವೃತ್ತಿಪರತೆ ಮೈಗೂಡಿಸಿಕೊಂಡು ಸೌಹಾರ್ದ ಸಹಕಾರಿ ಸಂಸ್ಥೆಗಳ ಬೆಳವಣಿಗೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಡಬೇಕು ಎಂದು ಕರೆ ನೀಡಿದರು. ಬಳಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರು ಪ್ರಸ್ತುತ ಪರಿಸ್ಥಿತಿಯಲ್ಲಿ ಸಹಕಾರಿ ಸಂಸ್ಥೆಗಳು ಕಾನೂನುಬದ್ಧ ಸಂಸ್ಥೆಗಳಾಗುವ ಅನಿವಾರ್ಯತೆ ಇದೆ. ಸೌಹಾರ್ದ ಸಹಕಾರಿ ಸಂಸ್ಥೆಗಳು ಕಾನೂನು/ಉಪವಿಧಿಗೆ ಅನುಗುಣವಾಗಿ ಕೆಲಸ ಮಾಡಿದಾಗ ಸಮಾಜದಲ್ಲಿ ಹೆಚ್ಚಿನ ಪ್ರತಿನಿತ್ಯ ಸಿಗುತ್ತದೆ ಎಂದು ತಿಳಿಸಿದ್ದರು. ಶ್ರೀ ಗುರುಪ್ರಸಾದ್ ಬಂಗೇರ ಇವರು ಸ್ವಾಗತಿಸಿ, ಪ್ರಸಾವಣೆಗೈದರು. ಶ್ರೀ ವಿಜಯ್ ಬಿ.ಎಸ್ ಇವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರದಲ್ಲಿ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಅನ್ವಯಿಸುವಿಕೆಯ ಕುರಿತಾದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಯಾದ ಶ್ರೀ ಶ್ರೇಯಸ್ ಕೆ.ಎಂ, ಡಿಪ್ಯೂಟಿ ಕಮೀಷನರ್, ಸೆಂಟ್ರಲ್ ಕಸ್ಟಮ್ಸ್ & ಜಿ.ಎಸ್.ಟಿ, ಮತ್ತು ಅನಿಯಂತ್ರಿತ ಠೇವಣಿ ಅಧ್ಯಾದೇಶದ ಕುರಿತಾದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಯಾದ ಶ್ರೀ ಅನೂಪ್ ದೇಶಪಾಂಡೆ, ವಕೀಲರು, ಧಾರವಾಡ ಇವರುಗಳು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ತರಬೇತಿ ಕಾರ್ಯಕ್ರಮದ ಸಮರೋಪ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್‌ಚಂದ್ರ, ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ, ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ. ಆರ್.ಪ್ರಸಾದ್ ಇವರುಗಳು ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್‌ಚಂದ್ರ ಇವರು ಸೌಹಾರ್ದ ಸಹಕಾರಿಯ ಸಿಬ್ಬಂದಿಗಳು ತರಬೇತಿಯನ್ನು ಪಡೆದು ಸಂಸ್ಥೆಯ ಆಸ್ತಿಯಾಗಿ ಬೆಳೆಯಬೇಕು. ಸಾಮಾಜಿಕ ಬದ್ಧತೆಯಿಂದ ಕಾರ್ಯವನ್ನು ನಿರ್ವಹಿಸುವ ಜೊತೆಗೆ ಮಳೆ ಕೊಯ್ಲು, ಗಿಡಗಳ ಸಂರಕ್ಷಣೆ ನಿಟ್ಟಿನಲ್ಲಿ ನಮ್ಮ ಸಂಸ್ಥೆಯ ಸದಸ್ಯರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದರು. ನಂತರದಲ್ಲಿ ಮಾತನಾಡಿದ ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ ಇವರು ಸಹಕಾರ ಸಂಸ್ಥೆಯ ಸಿಬ್ಬಂದಿಗಳು ಆರ್ಥಿಕ ಬದ್ಧತೆಯಿಂದ ಕಾರ್ಯನಿರ್ವಹಿಸುವ ಮೂಲಕ ಸಹಕಾರ ಕ್ಷೇತ್ರವನ್ನು ಉಳಿಸಿ ಬೆಳೆಸಬೇಕು ಎಂದು ತಿಳಿಸಿದರು. ಶ್ರೀ ಗುರುಪ್ರಸಾದ್ ಬಂಗೇರ ಇವರು ಸ್ವಾಗತಿಸಿ, ವಂದಿಸಿದರು.




**ಉಡುಪಿ** : ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ಅನಿಯಂತ್ರಿತ ಠೇವಣಿ ಸುಗ್ರೀವಾಜ್ಞೆ ಮತ್ತು ಸಾಲ ವಸೂಲಾತಿ ವಿಧಾನಗಳು ಕುರಿತು" ದಿನಾಂಕ: 18 ಜೂನ್ 2019 ಮಂಗಳವಾರದಂದು ಬೆಳಿಗ್ಗೆ 10.00 ಗಂಟೆಗೆ ನೈವೇದ್ಯ ಹೋಟೆಲ್, ತಾಲ್ಲೂಕು ಕಛೇರಿ ಸರ್ಕಲ್ ಹತ್ತಿರ, ಕೋರ್ಟ್ ರೋಡ್, ಉಡುಪಿ ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸತ್ಯೇಂದ್ರ ಪೈ ಮಾನ್ಯ ಅಧ್ಯಕ್ಷರು, ಶ್ರೀ ವೆಂಕಟರಮಣ ಸೌಹಾರ್ದ ಸಹಕಾರಿ ನಿ., ಉಡುಪಿ ಇವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಗಿರೀಶ್ ಪೈ, ಸನ್ನದು ಲೆಕ್ಕಪರಿಶೋಧಕರು ಉಡುಪಿ ಮತ್ತು ಶ್ರೀ ಅನೂಪ್ ದೇಶಪಾಂಡೆ ವಕೀಲರು ಧಾರವಾಢ ಇವರು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಹಾಗೂ ಶ್ರೀ ಗುರುಪ್ರಸಾದ್ ಬಂಗೇರರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 70 ಸೌಹಾರ್ದ ಸಹಕಾರಿಗಳಿಂದ 75 ಪ್ರತಿನಿಧಿಗಳು ಭಾಗವಹಿಸಿದ್ದರು.

ಸದರಿ ತರಬೇತಿಯಲ್ಲಿ ಅನಿಯಂತ್ರಿತ ಠೇವಣಿ ನಿಷೇಧ ಅಧಿಸೂಚನೆ ಕುರಿತು ಶ್ರೀ ಅನುಪ್ ದೇಶಪಾಂಡೆ, ವಕೀಲರು, ಧಾರವಾಢ ಇವರು ಉಪನ್ಯಾಸ ನೀಡಿದರು ಹಾಗೂ ಸಾಲ ವಸೂಲಾತಿ ವಿಧಾನಗಳ ಕುರಿತು ಎಸ್.ಜಿ. ಮಂಜುನಾಥ್ ಸಿಂಗ್, ಸಹಕಾರಿಗಳ ಸಹಾಯಕ ನಿಬಂಧಕರು ಇವರು ಉಪನ್ಯಾಸ ನೀಡಿದರು.

## ಸ್ವಯಂ ಕೃಷಿ ಸೌಹಾರ್ದ ಸಹಕಾರಿಯ ಸಮಾಪನಾಧಿಕಾರಿಯಾಗಿ ಶ್ರೀ ಎಂ. ಜಿ ಮುದೇನೂರ

ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0108) ಇದರ ಸಮಾಪನಾಧಿಕಾರಿಯಾಗಿ ಶ್ರೀ ವೈ ಕುಮಾರ್ ರವರು ನೇಮಕವಾಗಿದ್ದರು. ಆದರೆ ಸದರಿಯವರು ರಾಜೀನಾಮೆ ನೀಡಿ ಸಂಯುಕ್ತ ಸಹಕಾರಿಯ ಸೇವೆಯಿಂದ ಬಿಡುಗಡೆಗೊಂಡಿರುವ ಹಿನ್ನಲೆಯಲ್ಲಿ ಸದರಿ ಸಹಕಾರಿಯ ಸಮಾಪನಾಧಿಕಾರಿಯ ಮಾರ್ಪಾಡು ಆದೇಶ ಮಾಡುವ ಕುರಿತು ಮಾನ್ಯ ಸಹಕಾರಿಗಳ ನಿಬಂಧಕರು, ಬೆಂಗಳೂರು ರವರಿಗೆ ವಿನಂತಿಸಿದ ಪತ್ರದ ಮೇರೆಗೆ ಸದರಿ ಸಹಕಾರಿಗೆ ಮಾನ್ಯ ಸಹಕಾರಿಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂಖ್ಯೆ:ಆರ್‌ಸಿಎಸ್/ಸೌಹಾರ್ದ/ಸಮಾಪನೆ/156/2012–13 ದಿನಾಂಕ: 18.05.2019ರಂದು ಶ್ರೀ ಎಂ ಜಿ. ಮುದೇನೂರ, ಸಹಕಾರಿಗಳ ಸಹಾಯಕ ನಿಬಂಧಕರು, 1ನೇ ವಲಯ, 8ನೇ ಕ್ರಾಸ್, ಸಹಕಾರ ಸೌಧ, 1ನೇ ಮಹಡಿ, ಮಲ್ಲೇಶ್ವರಂ, ಬೆಂಗಳೂರು ರವರನ್ನು ಮಾರ್ಪಾಡು ಆದೇಶದ ಮೂಲಕ ಸಮಾಪನಾಧಿಕಾರಿಯಾಗಿ ನೇಮಕ ಮಾಡಿ ಆದೇಶ ನೀಡಿರುತ್ತಾರೆ.

## ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ




**ಮೈಸೂರು :** ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ ಸಂಪರ್ಕ ಸಭೆಯನ್ನು ದಿನಾಂಕ 17 ಜೂನ್ 2019 ಸೋಮವಾರದಂದು ಬೆಳಿಗ್ಗೆ 10.30 ಗಂಟೆಗೆ ಹೋಟೆಲ್ ಮಯೂರ ಹೊಯ್ಸಳ, ಜೆಎಲ್‌ಬಿ ರಸ್ತೆ, ರೈಲ್ವೆ ನಿಲ್ದಾಣದ ಹತ್ತಿರ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಉದ್ಘಾಟಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್‌ರವರು ವಹಿಸಿದರು. ಸದರಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರೊಂದಿಗೆ ಸೌಹಾರ್ದ ಸಹಕಾರಿಗಳು ಎದುರಿಸುವ ಸಮಸ್ಯೆಗಳ ಕುರಿತು ಚರ್ಚಿಸಿದರು.

ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಂ ಕೆ ಸೋಮಯ್ಯರವರು, ಶ್ರೀ ಕೃಷ್ಣ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್‌ರವರು, ಶ್ರೀ ವಾಗ್ದೇವಿ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನವೀನ್‌ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆರವರು ಹಾಗೂ ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 42 ಸೌಹಾರ್ದ ಸಹಕಾರಿಗಳಿಂದ 77 ಪ್ರತಿನಿಧಿಗಳು ಭಾಗವಹಿಸಿದ್ದರು.

## ಚಿಕ್ಕಮಗಳೂರು ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ



**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 20.06.2019 ಗುರುವಾರದಂದು ಬೆಳಿಗ್ಗೆ 10.30 ಗಂಟೆಗೆ ಸಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., ಹನುಮಂತಪ್ಪ ಸರ್ಕಲ್ ಹತ್ತಿರ, ಕೆ.ಎಂ.ರಸ್ತೆ, ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ನಾಗೇಶ್.ಎಸ್.ಡೋಂಗ್ರೆ ಸಹಕಾರ ಸಂಘಗಳ ಉಪನಿಬಂಧಕರು ಚಿಕ್ಕಮಗಳೂರು ಜಿಲ್ಲೆ ಇವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕೆ. ಬಿ. ದೇವರಾಜ ಮಾನ್ಯ ಅಧ್ಯಕ್ಷರು, ಸಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆರವರು ವಹಿಸಿದ್ದರು. ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ.ಜೆ. ಉಪಸ್ಥಿತರಿದ್ದರು.

## ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ ಕಾರ್ಯಕ್ರಮಗಳು



**ಬಾಗಲಕೋಟ :** ದಿನಾಂಕ 01.06.2019 ರಂದು ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಡಿಸಿಸಿ ಬ್ಯಾಂಕಿನ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ.ಎನ್.ಪಾಟೀಲ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಉದ್ಘಾಟನೆಯನ್ನು ಶ್ರೀ ಎಸ್ ಕೆ ಯಡಹಳ್ಳಿ, ಮಾನ್ಯ ನಿರ್ದೇಶಕರು, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ ಮತ್ತು ಶ್ರೀ ಎ ಎಸ್ ಲಾಗಾಲೋಟ, ಮಾನ್ಯ ನಿರ್ದೇಶಕರು, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಜೋಷಿ, ನಿವೃತ್ತ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಧಾರವಾಡ, ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 144 ಸೌಹಾರ್ದ ಸಹಕಾರಿಗಳಿಂದ 201 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ವಿಷಯದ ಕುರಿತು ಶ್ರೀ ಎಸ್.ಜಿ.ಜೋಷಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಉಪಾಧ್ಯಕ್ಷರು ಕೆಡಿಸಿಸಿ ಬ್ಯಾಂಕ್, ಶಿರಸಿ ಇವರು ಉಪನ್ಯಾಸ ನೀಡಿದರು.



**ಬೆಳಗಾವಿ :** ದಿನಾಂಕ 12.06.2019 ರಂದು ಬೆಳಗಾವಿ ಜಿಲ್ಲೆಯ ಗೋಕಾಕ, ಮೂಡಲಗಿ, ಬೈಲಹೊಂಗಲ, ಕಿತ್ತೂರು, ಖಾನಾಪೂರ ಮತ್ತು ಸವದತ್ತಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಕನ್ನಡ ಸಾಹಿತ್ಯ ಭವನ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಜಿ.ಎಸ್. ಟೋಪಣ್ಣವರ, ಮಾನ್ಯ ಪರಿವೀಕ್ಷಣಾಧಿಕಾರಿಗಳು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ. ಉದ್ಘಾಟನೆಯನ್ನು ಶ್ರೀ ಎಸ್.ಜಿ.ಜೋಷಿ, ನಿವೃತ್ತ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಧಾರವಾಡ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ಅಧಿಕಾರಿಗಳು ಹಾಗೂ ಶ್ರೀ ರಾಚಯ್ಯಾ ಹಿರೇಮಠ, ಅಧಿಕಾರಿಗಳು, ದಾವಾ ಪಂಚಾಯತ ನ್ಯಾಯಾಲಯ ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 123 ಸೌಹಾರ್ದ ಸಹಕಾರಿಗಳಿಂದ 142 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 13.06.2019 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ, ರಾಯಭಾಗ, ಮತ್ತು ಅಥಣಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಕನ್ನಡ ಸಾಹಿತ್ಯ ಭವನ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಜಿ.ಎಸ್.ಟೋಪಣ್ಣವರ ಮಾನ್ಯ ಪರಿವೀಕ್ಷಣಾಧಿಕಾರಿಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ. ಉದ್ಘಾಟನೆಯನ್ನು ಶ್ರೀ ಧನಪಾಲ ಹಾರೂಗೇರಿ, ಸಹಾಯಕ ಸರ್ಕಾರಿ ಅಭಿಯೋಜಕರು, ಜೆ.ಎಂ.ಎಫ್.ಸಿ ನ್ಯಾಯಾಲಯ, ಬೆಳಗಾವಿ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಜಿ.ಜೋಷಿ, ನಿವೃತ್ತ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಧಾರವಾಡ. ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ಅಧಿಕಾರಿಗಳು ಹಾಗೂ ಶ್ರೀ ರಾಚಯ್ಯಾ ಹಿರೇಮಠ ಅಧಿಕಾರಿಗಳು, ದಾವಾ ಪಂಚಾಯತ ನ್ಯಾಯಾಲಯ, ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 166 ಸೌಹಾರ್ದ ಸಹಕಾರಿಗಳಿಂದ 187 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 15.06.2019 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ರಾಮದುರ್ಗ ಮತ್ತು ಬೆಳಗಾವಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಕನ್ನಡ ಸಾಹಿತ್ಯ ಭವನ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಜಿ.ಎಸ್.ಟೋಪಣ್ಣವರ ಮಾನ್ಯ ಪರಿವೀಕ್ಷಣಾಧಿಕಾರಿಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ. ಉದ್ಘಾಟನೆಯನ್ನು ಶ್ರೀ ಅನೀಲ ಕರೋಶಿ, ನ್ಯಾಯಾವಾದಿಗಳು ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಜಿ.ಜೋಷಿ, ನಿವೃತ್ತ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಧಾರವಾಡ. ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ಅಧಿಕಾರಿಗಳು ಹಾಗೂ ಶ್ರೀ ರಾಚಯ್ಯಾ ಹಿರೇಮಠ, ಅಧಿಕಾರಿಗಳು, ದಾವಾ ಪಂಚಾಯ್ತಿ ನ್ಯಾಯಾಲಯ, ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 110 ಸೌಹಾರ್ದ ಸಹಕಾರಿಗಳಿಂದ 137 ಪ್ರತಿನಿಧಿಗಳು ಭಾಗವಹಿಸಿದ್ದರು.

# ಕ್ಲಸ್ಟರ್ ತರಬೇತಿ ಕಾರ್ಯಕ್ರಮಗಳು



**ವಿಜಯಪುರ :** ದಿನಾಂಕ 18.06.2019 ರಂದು ವಿಜಯಪುರ ಜಿಲ್ಲೆಯ ಸಿಂದಗಿ ಹಾಗೂ ಮೋರಟಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಸೋಮವಂಶ ಆರ್ಯಕ್ಷತ್ರಿಯ ಸೌಹಾರ್ದ ಸಹಕಾರಿ ನಿ., ಸಿಂದಗಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 11 ಜನರು ಭಾಗವಹಿಸಿದ್ದರು.

ದಿನಾಂಕ 21.06.2019 ರಂದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಅಕ್ಕ ನಾಗಮ್ಮ ಮಹಿಳಾ ವಿವಿಧ್ಧೋದೇಶ ಸೌಹಾರ್ದ ಸಹಕಾರಿ ನಿ., ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 06 ಜನರು ಭಾಗವಹಿಸಿದ್ದರು.

ದಿನಾಂಕ 22.06.2019 ರಂದು ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 07 ಜನರು ಭಾಗವಹಿಸಿದ್ದರು.

ದಿನಾಂಕ 24.06.2019 ರಂದು ವಿಜಯಪುರ ಜಿಲ್ಲೆಯ ಕೋಲಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಕೋಲಾರ ಶ್ರೀ ಬಸವೇಶ್ವರ ವಿವಿಧ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 05 ಜನರು ಭಾಗವಹಿಸಿದ್ದರು.

ದಿನಾಂಕ 26.06.2019 ರಂದು ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಕರ್ನಾಟಕ ಅರ್ಬನ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ನಿಡಗುಂದಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 05 ಜನರು ಭಾಗವಹಿಸಿದ್ದರು.

ದಿನಾಂಕ 27.06.2019 ರಂದು ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ವೈಷ್ಣವಿ ಸೌಹಾರ್ದ ಸಹಕಾರಿ ನಿ., ಚಡಚಣ, ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 05 ಜನರು ಭಾಗವಹಿಸಿದ್ದರು.

ದಿನಾಂಕ 29.06.2019 ರಂದು ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ" ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 08 ಜನರು ಭಾಗವಹಿಸಿದ್ದರು.



**ಹಾವೇರಿ :** ದಿನಾಂಕ 20.06.2019 ರಂದು ಹಾವೇರಿ ಜಿಲ್ಲೆಯ ಹಿರೇಕೆರೂರ ಹಾಗೂ ರಟ್ಟಿಹಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಚುನಾವಣೆ, ದಾವಾ ದಾಖಲಾತಿ, ಆಡಳಿತ ನಿರ್ವಹಣೆ, ಸಾಮಾನ್ಯ ಸಭೆ ಹಾಗೂ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಹಿರೇಕೆರೂರ ತಾಲ್ಲೂಕಾ ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿ., ಹಿರೇಕೆರೂರು ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 12 ಸೌಹಾರ್ದ ಸಹಕಾರಿಗಳಿಂದ 12 ಜನರು ಭಾಗವಹಿಸಿದ್ದರು.

ದಿನಾಂಕ 26.06.2019 ರಂದು ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಚುನಾವಣೆ, ದಾವಾ ದಾಖಲಾತಿ, ಆಡಳಿತ ನಿರ್ವಹಣೆ, ಸಾಮಾನ್ಯ ಸಭೆ ಹಾಗೂ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಣಿಬಿನ್ನೂರು ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 10 ಜನರು ಭಾಗವಹಿಸಿದ್ದರು.

ದಿನಾಂಕ 28.06.2019 ರಂದು ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿನ ಕವಲೆತ್ತು ಹಾಗೂ ಮೆಣಸಿನಹಾಳ ಗ್ರಾಮದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ 'ಚುನಾವಣೆ, ದಾವಾ ದಾಖಲಾತಿ, ಆಡಳಿತ ನಿರ್ವಹಣೆ, ಸಾಮಾನ್ಯ ಸಭೆ ಹಾಗೂ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ' ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಬಂಟ್ಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ರಾಣಿಬೆನ್ನೂರು, ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 10 ಜನರು ಭಾಗವಹಿಸಿದ್ದರು.

ದಿನಾಂಕ 01.07.2019 ರಂದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ 'ಚುನಾವಣೆ, ದಾವಾ ದಾಖಲಾತಿ, ಆಡಳಿತ ನಿರ್ವಹಣೆ, ಸಾಮಾನ್ಯ ಸಭೆ ಹಾಗೂ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ' ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ವೀರಮಹೇಶ್ವರ ಸೌಹಾರ್ದ ಸಹಕಾರಿ ನಿ., ಬ್ಯಾಡಗಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 05 ಜನರು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 27.06.2019 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕೆಲವು ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ದಾವಾ ದಾಖಲಾತಿ' ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ದುರದುಂಡಿಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಸಂತೋಷ, ಮಾನ್ಯ ಅಧ್ಯಕ್ಷರು, ಶ್ರೀ ದುರದುಂಡಿಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಡಸೋಸಿ, ಇವರು ವಹಿಸಿದ್ದರು. ಈ ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 26 ಜನರು ಭಾಗವಹಿಸಿದ್ದರು.

ದಿನಾಂಕ 29.06.2019 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಬೇಟಗೇರಿ ಗ್ರಾಮದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ 'ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿ ಹಾಗೂ ಸಹಕಾರಿಯ ಚುನಾವಣೆ' ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಬೇಟಗೇರಿ, ಆಯೋಜಿಸಲಾಗಿತ್ತು. ತರಬೇತಿಯಲ್ಲಿ 03 ಸೌಹಾರ್ದ ಸಹಕಾರಿಗಳಿಂದ 05 ಜನರು ಭಾಗವಹಿಸಿದ್ದರು.



**ಗದಗ :** ದಿನಾಂಕ 26.06.2019 ರಂದು ಗದಗ ಜಿಲ್ಲೆಯ ಆಯ್ದ ಕೆಲವು ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಸಹಕಾರಿಯ ಚುನಾವಣೆ ಜರುಗಿಸುವ ವಿಷಯ ಕುರಿತು ಕ್ಲಸ್ಟರ್ ತರಬೇತಿಯನ್ನು ಜಗದ್ಗುರು ತೊಂಟದಾರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗದಗ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 08 ಸೌಹಾರ್ದ ಸಹಕಾರಿಗಳಿಂದ 09 ಜನರು ಭಾಗವಹಿಸಿದ್ದರು.



**ಉತ್ತರ ಕನ್ನಡ :** ದಿನಾಂಕ 29.06.2019 ರಂದು ಉತ್ತರ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ, ವಾದಿ ಹೇಳಿಕೆ ಹಾಗೂ ಚುನಾವಣೆ ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಸುಪ್ರಭಾತ ಸೌಹಾರ್ದ ಸಹಕಾರಿ ನಿ., ಅಂಕೋಲಾ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 08 ಸೌಹಾರ್ದ ಸಹಕಾರಿಗಳಿಂದ 08 ಜನರು ಭಾಗವಹಿಸಿದ್ದರು.



**ಧಾರವಾಡ :** ದಿನಾಂಕ 29.06.2019 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ 'ಚುನಾವಣೆ ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಧಾರವಾಡ ಜಿಲ್ಲಾ ಸಂಪರ್ಕ ಕಛೇರಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 09 ಜನರು ಭಾಗವಹಿಸಿದ್ದರು.

## ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ಉಪ ನಿಬಂಧಕರು(ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
**#62,2ನೇ ಮಹಡಿ, ಮಾರ್ಗೋಸಾ ರಸ್ತೆ,(3ನೇ ಮುಖ್ಯ), 18ನೇ ಕ್ರಾಸ್, ಪೈಪಲೈನ್, ಮಲ್ಲೇಶ್ವರಂ,**
**ಬೆಂಗಳೂರು-560055.**

**ಕ್ರಸಂ/ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ/2019-20** **ದಿನಾಂಕ 28.06.2019**

**ಇವರಿಗೆ,**
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

**ವಿಶೇಷ ಸೂಚನೆ**

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ (ನಿ441)ರಲ್ಲಿ ದಾವೆಯನ್ನು ದಾಖಲಿಸುತ್ತಿರುವ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ ಈ ಮೂಲಕ ತರಬಯಸುವುದೇನೆಂದರೆ ಸೌಹಾರ್ದ ಸಹಕಾರಿಗಳು ದಾವಾ ಪ್ರಕರಣಗಳನ್ನು ದಾಖಲಿಸುವಾಗ ವಿಷಯ ನಿರ್ವಾಹಕರ ಗಮನಕ್ಕೆ ತರದೇ ದಾವಾ ಶುಲ್ಕವನ್ನು ಮುಂಚಿತವಾಗಿ ಪಾವತಿಸುತ್ತಿರುವುದು ಕಂಡು ಬರುತ್ತಿದ್ದು ಇದರಿಂದ ಯಾವ ಸೌಹಾರ್ದ ಸಹಕಾರಿಗಳು ಎಷ್ಟು ದಾವಾ ಪ್ರಕರಣಗಳಿಗೆ ಎಷ್ಟು ಮೊತ್ತವನ್ನು ಪಾವತಿಸಿರುತ್ತಾರೆಂದು ತಿಳಿಯಲು ಹಾಗೂ ಸರ್ಕಾರಕ್ಕೆ ಮಾಹಿತಿ ಒದಗಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡುವ ಮೊದಲು **ವಿಷಯ ನಿರ್ವಾಹಕರಿಂದ ದಾವಾ ಪ್ರಕರಣದ ಅರ್ಜಿಯನ್ನು ಪರಿಶೀಲಿಸಿಕೊಂಡು ನಂತರದಲ್ಲಿ ವಿಷಯ ನಿರ್ವಾಹಕರು ತಿಳಿಸಿದ ದಾವಾ ಮೊತ್ತವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲು ಸೂಚಿಸಿದೆ.** ಒಂದು ವೇಳೆ ವಿಷಯ ನಿರ್ವಾಹಕರ ಗಮನಕ್ಕೆ ತಾರದೇ ಮುಂಚಿತವಾಗಿ ದಾವಾ ಮೊತ್ತವನ್ನು ಪಾವತಿಸಿ ನಂತರ ದಾವಾ ಪ್ರಕರಣವನ್ನು ದಾಖಲಿಸುವುದು ಕಂಡುಬಂದರೆ ಅಂತಹ ಮೊತ್ತವನ್ನು ದಾವಾ ಶುಲ್ಕವೆಂದು ಪರಿಗಣಿಸಲಾಗುವುದಿಲ್ಲ ಹಾಗೂ ಮರುಪಾವತಿಸಲು ಸಾಧ್ಯವಿರುವುದಿಲ್ಲದ ಕಾರಣ ಇನ್ನೂ ಮುಂದೆ ಸೌಹಾರ್ದ ಸಹಕಾರಿಗಳು ಇದನ್ನು ಗಮನಿಸಿ ಮುಂದಿನ ದಿನಗಳಲ್ಲಿ ದಾವಾ ಪ್ರಕರಣಗಳನ್ನು ದಾಖಲಿಸುವಾಗ ನ್ಯಾಯಾಲಯದ ವಿಷಯ ನಿರ್ವಾಹಕರಿಂದ ಪಾವಾತಿಸಬೇಕಾದ ದಾವಾ ಶುಲ್ಕ ಎಷ್ಟು ಎಂಬುವುದನ್ನು ತಿಳಿದುಕೊಂಡ ನಂತರ ಪಾವತಿಸಲು ಸೂಚಿಸಿದೆ.

ಉಪ ನಿಬಂಧಕರು (ನಿ-441) ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು-55 ದಾವಾ ಪಂಚಾಯಿತಿ ನ್ಯಾಯಾಲಯ

ಹೆಚ್ಚಿನ ಸಂ/-

**ಸಹಕಾರ ಸಂಘಗಳ ಉಪ ನಿಬಂಧಕರು (ನಿ.441)**
**ದಾವಾ ಪಂಚಾಯ್ತಿ ನ್ಯಾಯಾಲಯ**
**ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು.**

# ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಸದಸ್ಯ ಸಹಕಾರಿಗಳಿಂದ ಪ್ರತಿ ವರ್ಷ ಶಾಸನಬದ್ಧ ಪಾವತಿಗಳಾದ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ವಂತಿಗೆ ಹಾಗೂ ಪ್ರತಿನಿಧಿ ಶುಲ್ಕಗಳನ್ನು ಚೆಕ್/ಡಿಡಿ ಮೂಲಕ ಸ್ವೀಕರಿಸಲಾಗುತಿತ್ತು. ಸದರಿ ಚೆಕ್/ಡಿಡಿಗಳನ್ನು ಅಂಚೆ ಅಥವಾ ಕೋರಿಯರ್ ವಿವರವಾದ ಪತ್ರದ ಮೂಲಕ ಕಳುಹಿಸಬೇಕಾಗುತ್ತಿತ್ತು. ಇಂದಿನ ತಾಂತ್ರಿಕ ಯುಗದ ಬದಲಾವಣೆಯಂತೆ ಸಂಯುಕ್ತ ಸಹಕಾರಿಯು ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳು ಪಾವತಿಸುವ ವಂತಿಗೆಗಳನ್ನು ಸರಳೀಕರಣಗೊಳಿಸಿದೆ. ಸಂಯುಕ್ತ ಸಹಕಾರಿಯು ಆಕ್ಸಿಸ್ ಬ್ಯಾಂಕಿನೊಂದಿಗೆ ಒಪ್ಪಂದ ಮಾಡಿಕೊಂಡು Easy Pay System ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ ಹಾಗೂ ಪಾವತಿ ವಿಧಾನದ ಲಿಂಕ್‌ನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ರಲ್ಲಿ ಅಳವಡಿಸಲಾಗಿದೆ.

**ಈ ವ್ಯವಸ್ಥೆಯಿಂದ ಸದಸ್ಯ ಸಹಕಾರಿಗಳು ಕೆಳಗಿನ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು.**

1. ಸದಸ್ಯ ಸಹಕಾರಿಗಳು ತಮ್ಮ ಹತ್ತಿರವಿರುವ ಆಕ್ಸಿಸ್ ಬ್ಯಾಂಕಿನ ಶಾಖೆಯಲ್ಲಿ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ಶಿಕ್ಷಣ ನಿಧಿ ವಂತಿಗೆ ಮತ್ತು ವಾರ್ಷಿಕ ವಂತಿಗೆ ಹಾಗೂ ಪ್ರತಿನಿಧಿ ಶುಲ್ಕಗಳನ್ನು ಈ ವಿಧಾನದ ಮೂಲಕ ಪಾವತಿಸಬೇಕು.
2. ವಂತಿಗೆಗಳನ್ನು ನಗದು/ಚೆಕ್/ಡಿಡಿ ಮೂಲಕ ಮಾಡುವುದಾದಲ್ಲಿ ಹತ್ತಿರದ ಆಕ್ಸಿಸ್ ಬ್ಯಾಂಕ್ ಶಾಖೆಗೆ ಹೋಗಬೇಕು. ಒಂದು ವೇಳೆ ವಂತಿಗೆಯನ್ನು RTGS or NEFT ಮಾಡುವುದಾದಲ್ಲಿ ತಮ್ಮ ಸಹಕಾರಿಯಲ್ಲಿಯೇ ಮಾಡಬಹುದು.
3. ಪಾವತಿ ಮಾಡಿರುವ ಕುರಿತು ಸ್ವೀಕೃತಿ ತಕ್ಷಣ ಲಭ್ಯವಾಗುತ್ತದೆ.
4. ಈ ವ್ಯವಸ್ಥೆಯಲ್ಲಿ ಪಾವತಿ ಮಾಡುವುದರಿಂದ ಡಿಡಿ ಕಮೀಷನ್ ಮತ್ತು ಅಂಚೆ ವೆಚ್ಚಗಳನ್ನು ಸದಸ್ಯ ಸಹಕಾರಿಗಳು ಉಳಿಸಬಹುದು.
5. ತಾವು ಪಾವತಿಸಿದ ಮೊತ್ತ ಸಂಯುಕ್ತ ಸಹಕಾರಿಯ ಖಾತೆಗೆ ನಗದೀಕರಣವಾದ 10 ದಿನಗಳಲ್ಲಿ ಆಯಾ ವಿಭಾಗಗಳಿಂದ ರಸೀದಿಯನ್ನು ಸದಸ್ಯ ಸಹಕಾರಿಗಳಿಗೆ ಕಳುಹಿಸಲಾಗುವುದು.

**Easy Pay System ನಲ್ಲಿ ತಮ್ಮ ಪಾವತಿಗಳನ್ನು ಸಂಯುಕ್ತ ಸಹಕಾರಿಗೆ ಈ ಕೆಳಕಂಡ ಮಾರ್ಗದಲ್ಲಿ ಪಾವತಿ ಮಾಡಬೇಕಾಗಿರುತ್ತದೆ.**

- ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಹಾಗೂ ಪ್ರತಿನಿಧಿ ಶುಲ್ಕಗಳ ಪಾವತಿಗಳನ್ನು www.souharda.coop ವೆಬ್‌ಸೈಟ್‌ನಲ್ಲಿರುವ online Banking ನಲ್ಲಿ ಅಳವಡಿಸಲಾಗಿದೆ.
- ಈ online Banking ನಲ್ಲಿ ಸಂಯುಕ್ತ ಸಹಕಾರಿಯಿಂದ ತಮ್ಮ ಸಹಕಾರಿಗೆ ಒದಗಿಸಿದ ಖಾತೆ ಸಂಖ್ಯೆಯನ್ನು (ಉದಾಹರಣೆ: MNG0001) ನಮೂದಿಸಿ ವ್ಯಾಲಿಡೇಟ್ ಮಾಡಿದಾಗ ತಮ್ಮ ಸಂಸ್ಥೆಯ ಹೆಸರಿರುವ ಸ್ಕ್ರೀನ್ ತೆರೆಯುತ್ತದೆ.
- ಸ್ಕ್ರೀನ್ ಮೇಲೆ ಇರುವ ಸಹಕಾರಿಯ ಹೆಸರಿಗೂ ಮತ್ತು ತಮ್ಮ ಸಹಕಾರಿಯ ಹೆಸರಿಗೂ ತಾಳೆ ಮಾಡಿಕೊಂಡು ಪಾವತಿಗಳ ವಿವರಗಳನ್ನು ನಮೂದಿಸಿ ಚಲನ್ ಜನರೇಟ್ ಮಾಡಬೇಕು.
- ನಂತರ ಚಲನ್‌ನೊಂದಿಗೆ ತಮ್ಮ ಸಮೀಪವಿರುವ ಆಕ್ಸಿಸ್ ಬ್ಯಾಂಕ್ ಶಾಖೆಯಲ್ಲಿ ಪಾವತಿಸಬಹುದು.
- ಒಂದು ವೇಳೆ ವರ್ಗಾವಣೆ (Fund Transfer/RTGS/NEFT) ಮಾಡುವುದಾದರೇ ತಮ್ಮ ಖಾತೆಯಿಂದಲೇ ನೇರವಾಗಿ ಪಾವತಿ ಮಾಡಬಹುದು ಕೊನೆಯಲ್ಲಿ ಚಲನ್‌ನ್ನು ಪ್ರಿಂಟ್ ತೆಗೆದುಕೊಳ್ಳಬೇಕು.
- ಡಿಡಿ/ಚೆಕ್ ನಗದೀಕರಣ ನಿಯಮಕ್ಕೆ ಒಳಪಟ್ಟಿರುತ್ತದೆ. ಈ ಕುರಿತು ಯಾವುದೇ ಸ್ಪಷ್ಟೀಕರಣ ಬೇಕಾದರೆ ತಮ್ಮ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಸಂಯೋಜಕರು ಅಥವಾ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಲು ಈ ಮೂಲಕ ತಿಳಿಸಲಾಗುತ್ತಿದೆ. Easy Pay System ನಲ್ಲಿ ಪಾವತಿಸುವ ಹಂತವನ್ನು www.souharda.coop ನಲ್ಲಿ ಮುಖಪುಟದಲ್ಲಿ Easy Pay System Video ವನ್ನು Upload ಮಾಡಲಾಗಿದೆ ಅದನ್ನು ನೋಡಿಕೊಂಡು ಪಾವತಿ ಮಾಡಬಹುದು.
- ಸದಸ್ಯ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಪಾವತಿಸುವ ಪಾವತಿಗಳನ್ನು Easy Pay System ಮೂಲಕ ಕಡ್ಡಾಯವಾಗಿ ಪಾವತಿಸಲು ಕೋರಿದೆ.

ಹಿಂದಿನ ವರ್ಷ ಕೆಲವು ಸಹಕಾರಿಗಳು ವಾರ್ಷಿಕ ಶುಲ್ಕ/ಶಿಕ್ಷಣ ನಿಧಿ/ಲೆಕ್ಕಪರಿಶೋಧನಾ ವರದಿಗಳನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಕಳುಹಿಸಿರುತ್ತೀರಿ. ಈ ಎಲ್ಲ ಮಾಹಿತಿಗಳನ್ನು ಸಂಬಂಧಿಸಿದ ಪ್ರಾಂತೀಯ ಕಛೇರಿಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿದ್ದು, ಆದ್ದರಿಂದ ಇನ್ನು ಮುಂದೆ ಅಗತ್ಯ ಪಾವತಿ/ಮಾಹಿತಿ/ವರದಿಗಳನ್ನು ತಮ್ಮ ತಮ್ಮ ಪ್ರಾಂತದ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಹಾಗೂ ಜಿಲ್ಲಾ ಸಂಯೋಜಕರನ್ನು ಸಂಪರ್ಕಿಸಲು ಈ ಮೂಲಕ ತಿಳಿಸಲಾಗಿದೆ.

# ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ.ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 100/- |
| 2 | The Karnataka Souharda Sahakari Act 1997 | 75/- |
| 3 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/- |
| 4 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/- |
| 5 | ಸೌಹಾರ್ದ ಪತ್ತಿನ ಸಹಕಾರಿ ಮಾದರಿ ಉಪವಿಧಿ | 25/- |
| 6 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/- |
| 7 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/- |
| 8 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/- |
| 9 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/- |
| 10 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/- |
| 11 | ಕರ್ನಾಟಕ ರಾಜ್ಯದ ವಿಶಿಷ್ಟ ಸಹಕಾರ ಸಂಸ್ಥೆಗಳು | 40/- |
| 12 | Special Co-opearative Societies of Karnataka | 25/- |
| 13 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/- |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/- |
| 15 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/- |
| 16 | Karnataka High Court Judgements Related to Co-operative Sector | 200/- |
| 17 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/- |
| 18 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಬಾಗ –2 | 100/- |
| 19 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/- |
| 20 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀಪುಗಳು | 120/- |
| 21 | Karnataka High Court Judgements Related to Co-operative Sector Vol -2 | 400/- |
| 22 | Supreme Court Judgement Related to Co-operative Sector Volume - 1 | 150/- |

| | | |
|---|---|---|
| 23 | Supreme Court Judgement Related to Co-operative Sector Volume - 2 | 500/- |
| 24 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/- |
| 25 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/- |
| 26 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/- |
| 27 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/- |
| 28 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/- |
| 29 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/- |
| 30 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/- |
| 31 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/- |

## ದಾವಾ ಪಂಚಾಯ್ತಿ ನ್ಯಾಯಾಲಯದ ಎಬಿನ್ ಹಾಗೂ ಅಮಲ್ಜಾರಿ ಖಾತೆಗಳ ವಿವರ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ(ನಿ.441)ದಲ್ಲಿ ದಾವೆಯನ್ನು ಹೂಡುವ ಸಲುವಾಗಿ ಈ ಹಿಂದೆ ಹೊಂದಿದಂತಹ ಸಿಂಡಿಕೇಟ್ ಬ್ಯಾಂಕ್‌ನ ಉಳಿತಾಯ ಖಾತೆಗಳು ಅಂದರೆ ಎಬಿನ್ ಖಾತೆ ಸಂಖ್ಯೆ 04242010120551 ಮತ್ತು ಅಮಲ್ಜಾರಿ ಶುಲ್ಕ ಪಾವತಿಸುವ ಖಾತೆ ಸಂಖ್ಯೆ 04242010123239 ರದ್ದುಗೊಳಿಸುತ್ತಿದ್ದು ಪ್ರಸ್ತುತ ಚಾಲ್ತಿ ಖಾತೆಯನ್ನು ಹೊಂದಿದ್ದು ತಮ್ಮ ಗಮನಕ್ಕೆ ಈ ಮೂಲಕ ತರಬಯಸುತ್ತಾ ಪ್ರಸ್ತುತ ಚಾಲ್ತಿ ಖಾತೆಯ ವಿವರಗಳು ಈ ಕೆಳಗಿನಂತಿವೆ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ(ನಿ.441)ದಲ್ಲಿ ದಾವೆಯನ್ನು ಹೂಡುವ ಸೌಹಾರ್ದ ಸಹಕಾರಿಗಳು ಸಿಂಡಿಕೇಟ್ ಬ್ಯಾಂಕ್‌ನಲ್ಲಿ Karnataka state souharda federal co operative ltd., ಎಂಬ ಹೆಸರಿನಲ್ಲಿ ದಾವಾ ಶುಲ್ಕವನ್ನು (ABN fees only) ಮಾತ್ರ ಖಾತೆ ಸಂಖ್ಯೆ: 04241010005443, Ifsc code : SYNB0000424 ಶಾಖೆ ಮಲ್ಲೇಶ್ವರಂನಲ್ಲಿ, ಹೊಂದಿದ್ದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸಲು ಕೋರಿದೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ(ನಿ.441)ದಲ್ಲಿ ಅಮಲ್ಜಾರಿ ಪ್ರಕರಣವನ್ನು ದಾಖಲಿಸುವ ಸೌಹಾರ್ದ ಸಹಕಾರಿಗಳು ಸಿಂಡಿಕೇಟ್ ಬ್ಯಾಂಕ್‌ನಲ್ಲಿ Karnataka state souharda federal co operative ltd., Executive petition Or KSSFCL Executive petition ಎಂಬ ಹೆಸರಿನಲ್ಲಿ ಅಮಲ್ಜಾರಿ ಶುಲ್ಕವನ್ನು(EP fees only) ಮಾತ್ರ ಖಾತೆ ಸಂಖ್ಯೆ: 04241010005462, Ifsc code : SYNB0000424 ಶಾಖೆ ಮಲ್ಲೇಶ್ವರಂನಲ್ಲಿ, ಹೊಂದಿದ್ದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸಲು ಕೋರಿದೆ.

ಸೌಹಾರ್ದ ಸಹಕಾರಿಗಳು ಮೊದಲು ವಿಷಯ ನಿರ್ವಾಹಕರಿಂದ ದಾವಾ/ಅಮಲ್ಜಾರಿ ಪ್ರಕರಣಗಳ ಅರ್ಜಿಯನ್ನು ಪರಿಶೀಲಿಸಿದ ನಂತರ ಅವರುಗಳು ತಿಳಿಸಿದ ದಾವಾ/ಅಮಲ್ಜಾರಿ ಮೊತ್ತವನ್ನು ಬ್ಯಾಂಕಿನ ಆಯಾ ಖಾತೆಗೆ ಪಾವತಿಸಿ ಸಹಕರಿಸಲು ಕೋರಿದೆ.

**ದಾವಾ ವಿಭಾಗ**

**ಬೆಳಗಾವಿ ಪ್ರಾಂತ :– ರಾಚಯ್ಯ ಹಿರೇಮಠ, ದೂರವಾಣಿ ಸಂಖ್ಯೆ 8884460278**

**ಕಲಬುರಗಿ ಪ್ರಾಂತ :– ಶ್ರೀಧರ, ದೂರವಾಣಿ ಸಂಖ್ಯೆ 9513566601**

**ಬೆಂಗಳೂರು ಪ್ರಾಂತ :– ಶ್ರೀಧರ ಮಟೋಳ್ಳಿ, ದೂರವಾಣಿ ಸಂಖ್ಯೆ 8548049598**

**ಮೈಸೂರು ಪ್ರಾಂತ :– ಬಲರಾಮ್ ಎನ್, ದೂರವಾಣಿ ಸಂಖ್ಯೆ 8884460273**

**ಅಮಲ್ಜಾರಿ ವಿಭಾಗ**

**ಬೆಳಗಾವಿ ಮತ್ತು ಕಲಬುರಿಗಿ ಪ್ರಾಂತಗಳು :– ವಿನೋದ ಹೆಚ್ ಎ 8884466730**

**ಬೆಂಗಳೂರು ಮತ್ತು ಮೈಸೂರು ಪ್ರಾಂತಗಳು :– ದರ್ಶನ್ ಕೆ 8884460265**



ಮಂಡ್ಯ : ದಿನಾಂಕ 17.06.2019 ರಂದು ಲೋಕಪಾವನಿ ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಂಡ್ಯ ಸದರಿ ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ಮಾಡಿ ಸೌಹಾರ್ದ ಕಾಯ್ದೆಗೆ ಪರಿವರ್ತನೆಗೊಳ್ಳಲು ಕುರಿತು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಜಿಲ್ಲಾ ಸಂಯೋಜಕರಾದ ಶ್ರೀ ಎಂ. ಚಂದ್ರಶೇಖರಯ್ಯ ಉಪಸ್ಥಿತರಿದ್ದರು.



ಚಾಮರಾಜನಗರ: ದಿನಾಂಕ 29.06.2019ರಂದು ನಡೆದ ನೂತನ ಸೌಹಾರ್ದ ಸಹಕಾರಿ ಪ್ರವರ್ತಕರುಗಳ ಅಧಿಪ್ರೇರಣಾ ಸಭೆ.



ದಾವಣಗೆರೆ : ದಾವಣಗೆರೆ ಜಿಲ್ಲೆಯ ಉದ್ದೇಶಿತ ಶ್ರೀ ಮಣಿಕಂಠ ನ್ಯಾಮತಿ ಸೌಹಾರ್ದ ಸಹಕಾರಿ ನಿ., ಸದರಿ ಸಹಕಾರಿಯ ಪ್ರವರ್ತಕರ ಸಭೆಯು ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಿತು.



ರಾಮನಗರ : ರಾಮನಗರ ಉಪ ನಿಬಂಧಕರಾದ ಶ್ರೀ ಕೃಷ್ಣಮೂರ್ತಿ ರವರಿಗೆ ಉದ್ದೇಶಿತ ರಾಮನಗರ ಸೌಹಾರ್ದ ಸಹಕಾರಿಯ ನೋಂದಣಿಗೆ ಪ್ರಸ್ತಾವನೆ ಸಲ್ಲಿಸಿ ಷೇರು ಸಂಗ್ರಹಕ್ಕೆ ಅನುಮತಿ ನೀಡಲು ಮನವಿ ಮಾಡಲಾಯಿತು.



ಕಲಬುರಗಿ : ಕಲಬುರಗಿ ಸೌಹಾರ್ದ ಸಹಕಾರಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು.



ರಾಮನಗರ : ದಿನಾಂಕ 18.06.2019ರಂದು ಕಲ್ಪತರು ಗ್ರಾಮೀಣ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ರಾಮನಗರ ಸದರಿ ಸಹಕಾರಿಗೆ ರಾಮನಗರ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ರವರು ಭೇಟಿ ನೀಡಿ ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತನೆಗೆ ಮನವಿ ಮಾಡಿದರು.



ಹಾವೇರಿ : ಉದ್ದೇಶಿತ ಶ್ರೀ ಜಗದ್ಗುರು ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆ.



ದಕ್ಷಿಣ ಕನ್ನಡ : ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹರೀಶ್ ಕುಮಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಉದ್ದೇಶಿತ ಶ್ರೀ ಪ್ರಿಯದರ್ಶಿನಿ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆ.

# ಉದ್ಘಾಟನಾ ಕಾರ್ಯಕ್ರಮ



**ಹೊಸದುರ್ಗ:** ಹೊಸದುರ್ಗ ಸೌಹಾರ್ದ ಸಹಕಾರಿ ನಿ., ಇದರ ಉದ್ಘಾಟನಾ ಕಾರ್ಯಕ್ರಮ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತ ರೆಡ್ಡಿ ರವರು ಭಾಗವಹಿಸಿ ಶುಭಕೋರಿದರು. ನಂತರ ಅವರನ್ನು ಸನ್ಮಾನಿಸಿದರು. ಸದರಿ ಕಾರ್ಯಕ್ರಮದಲ್ಲಿ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸದಸ್ಯರುಗಳ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು.

**ಕಲಬುರಗಿ:** ದಿನಾಂಕ 02.06.2019 ರಂದು ಖಾಜಾ ಬಂದಾನವಾಜ ಮೈನಾರಿಟಿ ಸೌಹಾರ್ದ ಕೋ-ಆಪರೇಟಿವ್ ಲಿ., ಸದರಿ ಸಹಕಾರಿಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಹಾಗೂ ಖಾಜಾ ಬಂದಾನವಾಜ ದರ್ಗಾದ ಪೀಠಾಧಿಪತಿಯಾದ ಡಾ. ಸೈಯದ್ ಷಾ ಖುಸ್ರೋ ರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಸೈಯದ್ ಮಹಮ್ಮದ್ ಅಲಿ ಅಲ್ ಹುಸೈನಿ, ಆಡಳಿತ ಮಂಡಳಿ ನಿರ್ದೇಶಕರು, ಸಹಕಾರಿಯ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.





**ಉಡುಪಿ :** ದಿನಾಂಕ 23.06.2019ರಂದು ಅನನ್ಯ ಸೌಹಾರ್ದ ಸಹಕಾರಿ ನಿಯಮಿತ ಉಡುಪಿ ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ನೇರವೇರಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ಉಪಸ್ಥಿತರಿದ್ದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಿಂದ ಶ್ಲಾಘನೀಯ ಕಾರ್ಯ – ಪ್ರಗತಿಪರ ಕೃಷಿಕ ಶ್ರೀ ವಿಶ್ವಪ್ರಸಾದ್ ಸೇಡಿಯಾಪು




ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಎಂ ಎಸ್ ರಸ್ತೆ ಶಾಖೆಯ ವಾರ್ಷಿಕೋತ್ಸವದ ಪ್ರಯುಕ್ತ ನಡೆದ ವಿನೂತನ ಶೈಲಿಯ ಗ್ರಾಹಕರ ದಿನ ಆಚರಣೆಯಲ್ಲಿ ಭಾಗವಹಿಸಿದ ಎಲ್ಲರಿಗೂ ವಿವಿಧ ಬಗೆಯ ಹಣ್ಣುಗಳ ಗಿಡಗಳನ್ನು ವಿತರಿಸಿ ಪ್ರಗತಿಪರ ಕೃಷಿಕರಾಗಿರುವ ಶ್ರೀ ವಿಶ್ವಪ್ರಸಾದ್ ಸೇಡಿಯಾಪು ಸಹಕಾರಿಯ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು.

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಎಂ ಎಸ್ ರಸ್ತೆ ಶಾಖೆಯ ವಾರ್ಷಿಕೋತ್ಸವದ ಪ್ರಯುಕ್ತ ಗ್ರಾಹಕರ ದಿನ ಹಾಗೂ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪರಿಸರ ಜಾಗೃತಿ ಕಾರ್ಯಕ್ರಮ ದಿನಾಂಕ 08-06-2019 ರಂದು ಎಂ ಎಸ್ ರಸ್ತೆಯ ರಾಧಿಕಾ ಪ್ಲಾಜದಲ್ಲಿ ನೆರವೇರಿತು.

ಸಹಕಾರಿ ತತ್ವದ ಮೂಲಕ ಪುತ್ತೂರಿನಲ್ಲಿ ಆರಂಭಗೊಂಡ ಪ್ರತಿಷ್ಠಿತ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯು ಇಂದು ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯ ಮೂಲಕ ರಾಜ್ಯದಲ್ಲಿ ಗುರುತಿಸುವಂತಾಗಿದೆ. ಇದಕ್ಕೆ ಸರ್ವ ಸದಸ್ಯರ ಬೆಂಬಲ ಹಾಗೂ ಸಹಕಾರ ಕಾರಣವಾಗಿದೆ. ಎಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ ರವರು ತಿಳಿಸಿದರು.

## ಉಡುಪಿ ಜನಸೇವಾ ಸೌಹಾರ್ದ ಸಹಕಾರಿ ಹಾಗೂ ಕಟ್ಟಡ ಕಾರ್ಮಿಕ ಸಂಘದ ವತಿಯಿಂದ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮ



**ಉಡುಪಿ :** ಗಂಗೊಳ್ಳಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಗಂಗೊಳ್ಳಿ ಘಟಕ ಮತ್ತು ಉಡುಪಿ ಜನಸೇವಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಇದರ ಸಂಯುಕ್ತ ಆಶ್ರಯದಲ್ಲಿ ಇಂದು ಕಟ್ಟಡ ಕಾರ್ಮಿಕರ ನೂರಾರು ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಹಾಗು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವನ್ನು ಗಂಗೊಳ್ಳಿಯ ಶಾರದ ಮಂಟಪದಲ್ಲಿ ಹಮ್ಮಿಕೊಳ್ಳಲಾಯಿತು.



**ಉಡುಪಿ :** ಜನಸೇವಾ ಕ್ರೆಡಿಟ್ ಸೌಹಾರ್ದ್ ಸಹಕಾರಿ ನಿ., ಉಡುಪಿ ಇದರ ಸಾಮಾಜಿಕ ಹಾಗೂ ಶೈಕ್ಷಣಿಕ ಸೇವೆಯನ್ನು ಗುರುತಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ, ಗಂಗೊಳ್ಳಿ ಘಟಕದ ಪದಾಧಿಕಾರಿಗಳು ಸಹಕಾರಿಗೆ ಭೇಟಿ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಕುಂದಾಪುರ ತಾಲ್ಲೂಕಿನ ಉಪಾಧ್ಯಕ್ಷರಾದ ಚಿಕ್ಕ ಮೊಗವೀರ ಮತ್ತು ಸಹಕಾರಿಯ ಪರವಾಗಿ ಪ್ರಶಾಂತ್, ಮಹಮ್ಮದ್ ಝುಕಿ, ಮಹಮ್ಮದ್ ಶಾರೂಕ್ ರವರು ಉಪಸ್ಥಿತರಿದ್ದರು

## ವಿಶ್ವ ಪರಿಸರ ದಿನಾಚರಣೆ



**ಕೋಲಾರ :** ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶ್ರೀ ಸಾಯಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಕೋಲಾರ. ಸದರಿ ಸಹಕಾರಿಯಿಂದ ವಿಶ್ವ ಪರಿಸರ ದಿನದ ಅಂಗವಾಗಿ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಕರು ಹಾಗೂ ಸಿಬ್ಬಂದಿಗಳು ಸೇರಿ ಕೋಲಾರ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯಲ್ಲಿ ಆವರಣದಲ್ಲಿ 10 ಸಸಿಗಳನ್ನು ನೇಡುವ ಮೂಲಕ ಜಾಗೃತಿ ಮೂಡಿಸಿದರು.

## ಲವಣಗಿರಿ ಸೌಹಾರ್ದ ಸಹಕಾರಿಯಿಂದ ಮಹಿಳೆಯರ ಆರ್ಥಿಕ ಸಬಲೀಕರಣ



**ಧಾರವಾಡ :** ಗ್ರಾಮೀಣ ಭಾಗದ ಮಹಿಳೆಯರಿಗೆ ಸಕಾಲಿಕವಾಗಿ ಅತೀ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ನೀಡುತ್ತಾ ಮಹಿಳೆಯರ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಗ್ರಾಮದ ಲವಣಗಿರಿ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯು ಉತ್ತಮ ಕಾರ್ಯ ಮಾಡುತ್ತಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಷಡಚಣ್ಣವರ ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಥಳೀಯ ಮೂರು ಸಾವಿರ ವಿರಕ್ತಮಠದ ಕಾಂಪ್ಲೆಕ್ಸ್‌ನಲ್ಲಿ ಇರುವ ಲವಣಗಿರಿ ಮಹಿಳಾ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿಯ ಕಛೇರಿಗೆ ಭೇಟಿ ನೀಡಿ, ಸಹಕಾರಿಯ ಕಾರ್ಯಚಟುವಕೆಗಳನ್ನು ಖುದ್ದು ವೀಕ್ಷಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿಯೇ ಮಹಿಳೆಯರಿಂದ ಸ್ಥಾಪಿತವಾದ ಸೌಹಾರ್ದ ಸಹಕಾರಿಯಲ್ಲಿ ಈ ಸಹಕಾರಿಯು ಅದರಲ್ಲಿಯೂ ಗ್ರಾಮೀಣ ಭಾಗದ ಜನರ ಆರ್ಥಿಕ ಸಬಲೀಕರಣಕ್ಕೆ ನಿಸ್ವಾರ್ಥವಾಗಿ ಸೇವೆ ಮಾಡುತ್ತಿದೆ. ಈ ಮಹಿಳಾ ಸೌಹಾರ್ದ ಸಹಕಾರಿಯು ಪ್ರಾರಂಭವಾಗಿ 7 ವರ್ಷಗಳಾಗಿದ್ದು ಆಡಳಿತ ಮಂಡಳಿಯ ಹಾಗೂ ಸಿಬ್ಬಂದಿಯ ಪ್ರಾಮಾಣಿಕ ಸೇವೆಯಿಂದಾಗಿ ಪ್ರಾರಂಭದ ವರ್ಷದಿಂದ ಪ್ರತಿ ವರ್ಷವೂ ಈ ಸಹಕಾರಿಯು ಹೆಚ್ಚು ಹೆಚ್ಚು ಲಾಭಗಳಿಸುತ್ತಾ ಬರುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಹಕಾರಿಯ ವತಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಚಂದ್ರಕಾಂತ ಷಡಚಣ್ಣವರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಹಕಾರಿಯ ಅಧ್ಯಕ್ಷೆ ಛಾಯ ಪದಕಿ, ಮಾಜಿ ಅಧ್ಯಕ್ಷೆ ಹಾಗೂ ಹಾಲಿ ನಿರ್ದೇಶಕಿ ದಾಕ್ಷಾಯಣಿ ತೊಗ್ಗಿ, ಸಿಬ್ಬಂದಿಗಳಾದ ನವ್ಯಾ ಬೀಡಿ, ರಾಜೇಶ್ವರಿ ಮೊರಬ ಉಪಸ್ಥಿತರಿದ್ದರು.

## ವರ್ಷಾಂತ್ಯದ ಆರ್ಥಿಕ ಮಾಹಿತಿ

### ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು

| ಆರ್ಥಿಕ ಅಂಶಗಳು | 30.03.2019 ಕ್ಕೆ ಇದ್ದಂತೆ |
|---|---|
| ಸದಸ್ಯರು | 4697 |
| ಷೇರು ಬಂಡವಾಳ | 318.91 |
| ನಿಧಿಗಳು | 351.77 |
| ಠೇವಣಿಗಳು | 4798.54 |
| ದುಡಿಯುವ ಬಂಡವಾಳ | 5469.22 |
| ಸಾಲ ಹಾಗೂ ಮುಂಗಡಗಳು | 3906.74 |
| ಹೂಡಿಕೆಗಳು | 1285.00 |
| ಒಟ್ಟು ಆದಾಯ | 807.66 |
| ನಿವ್ವಳ ಲಾಭ | 238.11 |

### ಶ್ರೀ ಸಿದ್ದಿವಿನಾಯಕ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಚಿಕ್ಕೋಡಿ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಸದಸ್ಯರು | 2000 |
| ಷೇರು ಬಂಡವಾಳ | 25,70,800.00 |
| ನಿಧಿಗಳು | 1,18,54,968.14 |
| ಠೇವಣಿಗಳು | 35,52,48,757.69 |
| ಸಾಲಗಳು | 25,89,73,423.90 |
| ಗುಂತಾವಣೆಗಳು | 10,31,30,267.00 |
| ಬ್ಯಾಂಕಿನಲ್ಲಿ ಠೇವಣಿಗಳು | 57,39,081.13 |
| ದುಡಿಯುವ ಬಂಡವಾಳ | 36,96,74,525.00 |
| ಒಟ್ಟು ವಾಹಿವಾಟು | 37,54,99,702.03 |
| ನಿವ್ವಳ ಲಾಭ | 40,84,900.00 |
| ಶಾಖೆಗಳು | 2 |

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ನಿಸರ್ಗ ಸ್ವ ಶಕ್ತಿ ಸೌಹಾರ್ದ ಸ್ವ ಸಹಾಯ ಸಹಕಾರಿ ನಿ., ಚಿತ್ರದುರ್ಗ


ಶ್ರೀಮತಿ ಟಿ. ಅನುಸೂಯ
ಅಧ್ಯಕ್ಷರು


ಶ್ರೀಮತಿ ಎಸ್. ಮಂಜುಳ
ಉಪಾಧ್ಯಕ್ಷರು

### ಶ್ರೀ ಸಿರಿ ಸಮೃದ್ಧಿ ಮಹಿಳಾ ಸೌಹಾರ್ದ ಸಹಕಾರಿ ತುಮಕೂರು


ಶ್ರೀಮತಿ ವಾಸವಿ ಗುಪ್ತ
ಅಧ್ಯಕ್ಷರು


ಶ್ರೀಮತಿ ಲತಾ ರವಿಕುಮಾರ್
ಉಪಾಧ್ಯಕ್ಷರು

### ಸೋಂಪುರ ಲಕ್ಷ್ಮಿದೇವಿ ಸೌಹಾರ್ದ ಕೋ–ಆಪರೇಟಿವ್ ಲಿ., ತುಮಕೂರು


ಶ್ರೀ ಎಸ್, ಶೇಖರಪ್ಪ
ಅಧ್ಯಕ್ಷರು


ಶ್ರೀ ಎಮ್, ಬಿ ಬಸವರಾಜು
ಉಪಾಧ್ಯಕ್ಷರು



**ಬೈಂದೂರು** : ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ., ಬೈಂದೂರು ಇದರ ಅಧ್ಯಕ್ಷರಾದ ಶ್ರೀ ಎಸ್. ರಾಜು ಪೂಜಾರಿಯವರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಇದರ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಸದರಿಯವರಿಗೆ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ಅಭಿನಂದನೆ ತಿಳಿಸಿದರು.

# ಸಹಕಾರ ಕ್ಷೇತ್ರದಲ್ಲಿ ಆನ್‌ಲೈನ್ ಮೂಲಕ ನೇಮಕಾತಿ ಪರೀಕ್ಷೆಗೆ ಅಣಿಯಾಯಿತು ವಿಕಾಸ ಬ್ಯಾಂಕ್



**ಹೊಸಪೇಟೆ :** ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಮೊದಲ ಬಾರಿಗೆ ಎಂಬಂತೆ "ಸ್ಮಾರ್ಟ್ ಫೋನ್ ಮೂಲಕ ಆನ್‌ಲೈನ್ ನೇಮಕಾತಿ ಪರೀಕ್ಷೆ ನಡೆಸಿ ತಾಂತ್ರಿಕತೆ ಬಳಕೆಯಲ್ಲಿ ಸಹಕಾರಿಗಳು ಹಿಂದಿಲ್ಲಾ ಎಂಬ ಸಂದೇಶವನ್ನು ಇಲ್ಲಿಯ ವಿಕಾಸ ಸೌಹಾರ್ದ ಕೋ-ಆಪ್‌ರೇಟಿವ್ ಬ್ಯಾಂಕ್ ಸಾರಿದೆ.

ಭಾನುವಾರ ಸಿಬ್ಬಂದಿಗಳ ನೇಮಕಾತಿಗಾಗಿ ಇಲ್ಲಿಯ ವಿಜಯನಗರ ಕಾಲೇಜಿನಲ್ಲಿ ನಡೆದ ಪರೀಕ್ಷೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಸುಮಾರು 640 ಕ್ಕೂ ಹೆಚ್ಚು ಪರೀಕ್ಷಾರ್ಥಿಗಳು ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದ ಆನ್‌ಲೈನ್ ಪರೀಕ್ಷೆಗೆ ಸಾಕ್ಷೀಕರಿಸಿದರು.

ಬೆಂಗಳೂರಿನ "ಕೋಡ್‌ಗ್ರೌಂಡ್" ಸಂಸ್ಥೆಯ ತಾಂತ್ರಿಕ ಸಹಯೋಗದೊಂದಿಗೆ ಜರುಗಿದ ಆನಲೈನ್ ಪರೀಕ್ಷೆಯಲ್ಲಿ ಬ್ಯಾಂಕಿಂಗ್, ಸಾಮಾನ್ಯಜ್ಞಾನ, ಸಹಕಾರ, ಕನ್ನಡ, ಇತ್ಯಾದಿಗಳ ಒಟ್ಟು ಏಳು ವಿಭಾಗಗಳಲ್ಲಿ 125 ಪ್ರಶ್ನೆಗಳಿಗೆ 75 ನಿಮಿಷಗಳಲ್ಲಿ ಉತ್ತರಿಸಿ ಆನ್‌ಲೈನ್ ಪರೀಕ್ಷೆಯನ್ನು ಯಶಸ್ವಿಗೊಳಿಸುವ ಮೂಲಕ ಹೊಸ ತಾಂತ್ರಿಕ ದಾಖಲೆಗೆ ವಿಕಾಸ ಬ್ಯಾಂಕ್ ಅಣಿಯಾಯಿತು. ಪರೀಕ್ಷಾರ್ಥಗಳ ಇಮೇಲ್‌ಗೆ ಬರುವ ಲಿಂಕನ್ನು ಸ್ಮಾರ್ಟ್ ಫೋನ್‌ನಲ್ಲಿ ತರೆದಾಗ 75 ನಿಮಿಷದಲ್ಲಿ ಬಹು ಆಯ್ಕೆಯ ಉತ್ತರ ಪದ್ಧತಿಯಲ್ಲಿ ಪರೀಕ್ಷೆಯನ್ನ ಎದುರಿಸಿ ಯಶಸ್ವಿಗೊಳಿಸಲಾಯಿತು. ಪರೀಕ್ಷೆ ಮುಗಿದಂತೆ ಪರೀಕ್ಷಾರ್ಥಿಗಳಿಗೆ ತತ್ ಕ್ಷಣ ಅವರು ಗಳಿಸಿದ ಅಂಕಗಳು, ತೆಗೆದುಕೊಂಡ ಸಮಯ, ಎದುರಿಸಿದ ಪ್ರಶ್ನೆಗಳು, ಸರಿಉತ್ತರ ಈ ರೀತಿ ಸಂದೇಶವು ಸಹ ಅವರ ಮೊಬೈಲಿಗೆ ದೊರೆಯುತ್ತಿದ್ದಂತೆಯೇ ಅಭ್ಯರ್ಥಿಗಳು ಪಾರದರ್ಶಕ ಪರೀಕ್ಷೆಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

"ಸಹಕಾರಿ ಸಂಸ್ಥೆಗಳು ನೇಮಕಾತಿಯಂತಹ ಪ್ರಕ್ರಿಯೆಯಲ್ಲಿ ಮತ್ತಷ್ಟು ಪಾರದರ್ಶಕತೆತರಲು, ಸಮಯ ಹಾಗೂ ಖರ್ಚು ಉಳಿತಾಯ ಜೊತೆಗೆ ಕಾಗದರಹಿತ ಪರೀಕ್ಷೆಯ ಮೂಲಕ ನೇಮಕಾತಿಗೆ ಮಾಡಿದ ಪ್ರಯೋಗ ಯಶಸ್ವಿಯಾಗಿದ್ದು ಬ್ಯಾಂಕಿನ ತಾಂತ್ರಿಕ ತಂಡ ಸೇರಿದಂತೆ ತಂತ್ರಜ್ಞನರ ಶ್ರಮಕ್ಕೆ ಬ್ಯಾಂಕಿನ ಅಧ್ಯಕ್ಷ ವಿಶ್ವನಾಥ ಚ. ಹಿರೇಮಠ ಹರ್ಷ ವ್ಯಕ್ತಪಡಿಸಿದರು.

ನಾವು ತಾಂತ್ರಿಕ ಬದಲಾವಣೆಗಳನ್ನು ಒಪ್ಪಿಕೊಳ್ಳಬೇಕು ಆ ಮೂಲಕ ಜಾಗತೀಕ ತಾಂತ್ರಿಕ ಸ್ಪರ್ಧೆಗೆ ಮುಂದಾಗಬೇಕು ಎಂಬ ಹೊಸ ಪ್ರಯತ್ನಮಾಡಿದ ವಿಕಾಸ ಆಡಳಿತ ಮಂಡಳಿಯ ನಿರ್ಧಾರ ಸಹಕಾರಿ ಕ್ಷೇತ್ರಕ್ಕೆ ಹೊಸ ಮೈಲಿಗಲ್ಲಾಗಿದೆ. ಎಲ್ಲಾ ಸಹಕಾರಿಗಳಿಗೂ ಹೆಮ್ಮೆಎಂದು ಪರೀಕ್ಷಾ ವಿಧಾನವನ್ನು ಪ್ರಾದೇಶಿಕ ಸಹಕಾರಿ ತರಬೇತಿ ಕೇಂದ್ರದ ನಿವೃತ್ತ ನಿರ್ದೇಶಕ ಡಾ॥ ಎಸ್. ಎ. ಸಿದ್ಧಾಂತಿ ಶ್ಲಾಘಿಸಿದರು.

ತಾಂತ್ರಿಕತೆಯನ್ನು ಮೈಗೂಡಿಸಿಕೊಳ್ಳುವುದರಿಂದ ಜಾಗತೀಕ ಸ್ಪರ್ಧೆಯನ್ನು ಎದುರಿಸುವುದು ಸುಲಭ ಮತ್ತು ಸುಲಲಿತ ಎಂಬುವುದನ್ನು ಮತ್ತು ಮುಂದುವರೆದು ಮೊಬೈಲ್‌ನಲ್ಲಿಯೇ ಇಂತಹ ಪರೀಕ್ಷೆಗಳು ಪಾರದರ್ಶಕತೆಗೆ ಸಾಕ್ಷಿಯಾಗಲಿವೆ ಎಂಬುದಕ್ಕೆ ಇಂದಿನ ಪರೀಕ್ಷಾರ್ಥಿಗಳು ಸಾಕ್ಷಿಯಾಗಿದ್ದಾರೆ ಎಂದು ನೇಮಕಾತಿ ಪರೀಕ್ಷೆಯ ತಾಂತ್ರಿಕ ಸಲಹೆಗಾರ ಎಸ್. ಜಿ. ಕುಲಕರ್ಣಿ ಆನ್‌ಲೈನ್ ಪರೀಕ್ಷೆಯಾದುದ್ದಕ್ಕೆ ಹರ್ಷ ವ್ಯಕ್ತಪಡಿಸಿದರು.

ಅಂದು ಸಂಜೆ 7:00 ಘಂಟೆಗೆ ಅರ್ಹ 72 ಅಭ್ಯರ್ಥಿಗಳ ವಿವರವನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಹಾಗೂ ಮುಖ್ಯ ಕಛೇರಿಯ ಅವರಣದಲ್ಲಿ ಪ್ರಕಟಿಸಲಾಯಿತು.

ಅರ್ಹ 72 ಅಭ್ಯರ್ಥಿಗಳ ಮೌಖಿಕ ಸಂದರ್ಶನವನ್ನು ಮರುದಿನ ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಬ್ಯಾಂಕಿನ ನೇಮಕಾತಿ ಸಮಿತಿಯ ಸದಸ್ಯರಾದ ಶ್ರೀ ವಿಶ್ವನಾಥ ಚ. ಹಿರೇಮಠ, ಅಧ್ಯಕ್ಷರು, ಶ್ರೀ ಅಮೃತ ಜೋಷಿ ನಿರ್ದೇಶಕರು, ಶ್ರೀ ಜಿ. ದೊಡ್ಡ ಬೋರಯ್ಯ ವೃತ್ತಿಪರ ನಿರ್ದೇಶಕರು, ಬಾಹ್ಯ ತಗ್ನರಾಗಿ ಪ್ರಾದೇಶಿಕ ಸಹಕಾರಿ ತರಬೇತಿ ಕೇಂದ್ರದ ನಿವೃತ್ತ ನಿರ್ದೇಶಕ ಡಾ॥ ಎಸ್. ಎ. ಸಿದ್ಧಾಂತಿ, ಪ್ರಾಂತೀಯ ಆಧಿಕಾರಿಯಾದ ಶ್ರೀ ರಾಜಶೇಖರ್ ಹೆಚ್, ಬ್ಯಾಂಕಿನ ಸಲಹೆಗಾರರಾದ ಶ್ರೀ ಬಿ. ಜೆ. ಕುಲಕರ್ಣಿ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಪ್ರಸನ್ನ ಹಿರೇಮಠ ಉಪಸ್ಥಿತರಿದ್ದರು.



ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸಿದ್ಧಿಪ್ರಿಯಾ ಮಹಿಳಾ ಸೌಹಾರ್ದ ಸಹಕಾರಿಯ 1ನೇ ವಾರ್ಷಿಕ ಸಾಮಾನ್ಯ ಸಭೆ – ಚಿಕ್ಕೋಡಿ



ಪಾವಗಡ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳು ಅಧ್ಯಯನ ಪ್ರವಾಸ ನಿಮಿತ್ತ ದಕ್ಷಿಣ ಕನ್ನಡ ಜಿಲ್ಲೆಯ ಕ್ಯಾಂಪ್ಕೋ ಸಹಕಾರಿಗೆ ಹಾಗೂ ಸರಸ್ವತಿ ಸೌಹಾರ್ದ ಸಹಕಾರಿ ಭೇಟಿ ನೀಡಿದರು.

## ಶ್ರೀ ಅರಿಹಂತ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ



**ಬೋರಗಾಂವ :** ಶ್ರೀ ಅರಿಹಂತ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.06.2019ರಂದು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ ರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರು ಹಾಗೂ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಅಶೋಕ ಜಿನ್ನು ಬಂಕಾಪುರೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಉಪಾಧ್ಯಕ್ಷರು, ಕೆನರಾ ಡಿಸಿಸಿ ಬ್ಯಾಂಕ್ ಇವರು ಸಹಕಾರ ಸಂಸ್ಥೆಗಳಲ್ಲಿ ವೃತ್ತಿ ಸಂಸ್ಕೃತಿ ಬಗ್ಗೆ ಉಪನ್ಯಾಸ ನೀಡಿದರು. ಡಾ. ಹರೀಶ್ ಕೆ.ಎಮ್. ಇವರು ಜೀವನ ಸಬಲತೆ ಬಗ್ಗೆ ಉಪನ್ಯಾಸ ನೀಡಿದರು ಹಾಗೂ ಡಾ. ನಂದೀಶ್ ಹಿರೇಮಠ ಇವರು ಸಾಮಾನ್ಯತೆಯಿಂದ ಅಸಾಮಾನ್ಯತೆ ಕಡೆಗೆ ಇದರ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮವು ಬೆಳ್ಳಿಗ್ಗೆ 9.30 ರಿಂದ ಸಂಜೆ 5.00 ಗಂಟೆಗೆ ವರೆಗೆ ನಡೆಯಿತು. ಕಾರ್ಯಕ್ರಮದಲ್ಲಿ 250 ಸಿಬ್ಬಂದಿಗಳು ಭಾಗವಹಿಸಿದರು.

## ಆಯ್ಕೆ



**ಮಂಗಳೂರು :** ದಿನಾಂಕ 02.06.2019ರಂದು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಒಡಿಯೂರು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈ ಮತ್ತು ಉಪಾಧ್ಯಕ್ಷರಾಗಿ ಪ್ರಣವ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಆರ್ ಪ್ರಸಾದ್ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಕುಡಿಯುವ ನೀರಿನ ವ್ಯವಸ್ಥೆ




**ಉತ್ತರ ಕನ್ನಡ :** ದಿನಾಂಕ 10.05.2019 ರಿಂದ 30.05.2019 ರ ವರೆಗೆ ಶ್ರೀ ಮಹಾಗಣಪತಿ–ಮಹಾಸತಿ (ಎಮ್.ಜಿ.ಎಮ್) ಸೌಹಾರ್ದ ಪತ್ತಿನ ಸಹಕಾರಿಯ ವತಿಯಿಂದ ಸಾರ್ವಜನಿಕರಿಗೆ ಉಚಿತ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಪ್ಪ ಮಂಜಪ್ಪ ನಾಯ್ಕ, ಉಪಾಧ್ಯಕ್ಷರಾದ ಶ್ರೀ ಸುರೇಶ ನಾಗಪ್ಪ ನಾಯ್ಕ ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

## ಇ–ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ




**ಕೊಪ್ಪಳ :** ಗಂಗಾ ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇರಕಲ್ಲಗಡ, ಕೊಪ್ಪಳ ಈ ಸಹಕಾರಿಯ ಬಸಾಪಟ್ಟಣದ ಶಾಖೆಯಲ್ಲಿ ಇ–ಸ್ಟಾಂಪಿಂಗ್ ಉದ್ಘಾಟನೆಯನ್ನು ಶ್ರೀಯುತ ಮಲ್ಲಿಕಾರ್ಜುನ ಪೋಲಿಸ್ ಪಾಟೀಲ, ತಾಲೂಕ ಪಂಚಾಯತ್ ಅಧ್ಯಕ್ಷರು, ಗಂಗಾವತಿ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಸದಸ್ಯರುಗಳು ಮತ್ತು ಮುಖಂಡರಾದ ದೇವಾನಂದ್ ದಾಸನಾಳ, ಶಿವಾನಂದ ಗೌಡರ ಚಿಕ್ಕಬೆಣಕಲ್, ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿವರ್ಗ ಹಾಗೂ ಪಿಗ್ಮಿ ಏಜೆಂಟರು ಹಾಜರಿದ್ದರು. ನಂತರ ಗಂಗಾವತಿ ತಾಲೂಕು ಪಂಚಾಯತ್ ಅಧ್ಯಕ್ಷರು ಶ್ರೀಯುತ ಮಲ್ಲಿಕಾರ್ಜುನ ಪೋಲಿಸ್ ಪಾಟೀಲರವರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

# ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ ರವರ ಮೆಚ್ಚುಗೆ ಪತ್ರ ಸಹಕಾರಿಗಳ ಅವಗಾಹನೆಗಾಗಿ ಪ್ರಕಟಿಸಿದೆ.

**THE CAMPCO LTD.**

Head Office : "Varanashi Towers", Mission Street, Mangaluru - 575 001, Karnataka

**S.R. SATISHCHANDRA**
President

ದಿನಾಂಕ: 06.06.2019

**ಬೆಂಗಳೂರು ವಿಶ್ವವಿದ್ಯಾಲಯ ಅರ್ಥಶಾಸ್ತ್ರ ವಿಭಾಗ ಮತ್ತು ಕರ್ನಾಟಕ ಸೌಹರ್ದ ಸಹಕಾರಿ ಸಂಘದ ವತಿಯಿಂದ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ**

ಬೆಂಗಳೂರು ವಿಶ್ವವಿದ್ಯಾಲಯ ಅರ್ಥಶಾಸ್ತ್ರ ವಿಭಾಗ ಮತ್ತು ಕರ್ನಾಟಕ ರಾಜ್ಯ ಸೌಹರ್ದ ಸಹಕಾರಿ ಸಂಘದ ಜಂಟಿ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಸೌಹರ್ದ ಸಹಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮವು ದಿನಾಂಕ ಮೇ, 15 ರಂದು ಬೆಂಗಳೂರು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುವ ಅವಕಾಶ ನನ್ನದಾಯಿತು. ಈ ಕಾರ್ಯಕ್ರಮವನ್ನು ಆಯೋಜಿಸಿದ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ಬದ್ಧತೆ ಮತ್ತು ಅವರು ಹೊಂದಿರುವ ಆಸಕ್ತಿ ನನ್ನನ್ನು ತುಂಬಾ ಪ್ರಭಾವಿಸಿತು. ಸಭಾ ಕಾರ್ಯಕ್ರಮ ಮುಗಿದ ಬಳಿಕ ನಡೆದ ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕೇಳಿದ ಆಯ್ದ ಪ್ರಶ್ನೆಗಳು.

ನಾವು ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಬಹುದಾ?, ನಾವು ಇಂತಹಾ ಸಹಕಾರಿ ಸಂಸ್ಥೆಗಳ ಅಧ್ಯಕ್ಷರಾಗಬಹುದಾ?, ಸಹಕಾರಿ ಸಂಸ್ಥೆಗಳಲ್ಲಿ ನಾವು ನೌಕರರಾಗಿ ದುಡಿಯಬಹುದಾ?, ಸಹಕಾರಿ ಸಂಸ್ಥೆಗಳಿಂದ ಸಮಾಜದ ಅಭಿವೃದ್ಧಿ ಹೇಗೆ?, ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಸಂಸ್ಥೆ ಹೇಗೆ ಸಹಾಯ ಮಾಡುತ್ತದೆ?. ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಯುವಕರಿಗೆ ಉದ್ಯೋಗ ಸಿಗುತ್ತಾದಾ?, ನೀವು ಹಾಲಿನ ಕ್ರಾಂತಿಯನ್ನು ಮಾಡಿದ ಗುಜರಾತಿನ ಪ್ರೋ. ವರ್ಗೀಸ್ ಕುರಿಯನ್ ಅವರನ್ನು ನೋಡಿದ್ದೀರಾ? ನೀವು ಭಾರತದ ಮಾಜಿ ರಾಷ್ಟ್ರಪತಿಗಳಾದ ಡಾ. ಅಬ್ದುಲ್ ಕಲಾಂ ಅವರನ್ನು ಮಾತಾನಾಡಿಸಿದ್ದೀರಾ? ಭಾರತದಲ್ಲಿ ಈಗ ಇರುವ ಪ್ರಜಾತಂತ್ರವನ್ನು ಹೇಗ ಬಣ್ಣಿಸುತ್ತೀರಿ?, ಮೇ ೨೩ ರ ದಿನವನ್ನು ನೀವು ಹೇಗೆ ಸ್ವಾಗತಿಸುತ್ತೀರಿ?, ಜ್ಞಾನ ಕ್ರಾಂತಿ (Knowledge Revolution) ಗೆ ಸಹಕಾರಿ ಕ್ಷೇತ್ರದ ಕೊಡುಗೆ ಏನು? ಸಹಕಾರಿ ಕ್ಷೇತ್ರಕ್ಕೆ ಭಾರತದ ಕೊಡುಗೆ ಏನು?, ಸಹಕಾರಿ ಕ್ಷೇತ್ರದಿಂದ ಭಾರತದ ಜಿ.ಡಿ.ಪಿ.ಗೆ ಏನು ಕೊಡುಗೆ ನೀಡುತ್ತದೆ?.

ಕೆಲವು ವರ್ಷಗಳ ಹಿಂದೆ ವಿದ್ಯಾರ್ಥಿಗಳು ಹೆಚ್ಚಾಗಿ ನಮ್ಮ ನೆಚ್ಚಿನ ನಟ, ನಟಿಯರ ಬಗ್ಗೆ ನಮ್ಮ ನೆಚ್ಚಿನ ಕ್ರಿಕೆಟ್ ತಾರೆಯರ ಬಗ್ಗೆ ಮಾತಾನಾಡುತ್ತಿದ್ದಾರೆ ಇಂದು ವಿದ್ಯಾರ್ಥಿಗಳು ಭವ್ಯ ಭಾರತವನ್ನು ನಿರ್ಮಿಸುವ ಸಲುವಾಗಿ ಭಾರತದ ಜಿ.ಡಿ.ಪಿ. ಕೃಷಿಕರ ಬೆಳವಣಿಗೆ, ಭಾರತವನ್ನು ಅಭಿವೃದ್ಧಿ ಪಥದಲ್ಲಿ ಕೊಂಡ್ಯೊಯುವ ಬಗ್ಗೆ ತಮ್ಮ ಚಿಂತನೆಯನ್ನು ಕಾಣುತ್ತಿದ್ದಾರೆ. ವಿದ್ಯಾರ್ಥಿಗಳ ಈ ರೀತಿಯ ಬೆಳೆವಣಿಗೆಯನ್ನು ಕಾಣಿದಾಗ ಭಾರತಕ್ಕೆ ಭವಿಷ್ಯ ಉಜ್ವಲವಾಗಿದೆ ಎಂಬುದನ್ನು ಕಾಣಬಹುದಾಗಿದೆ. ಸಭೆಯ ಮಧ್ಯದಲ್ಲಿ ಬಂದಂತಹ ಸರ್ವರಿಗೂ ಪಾನೀಯ, ಚಾಕಲೇಟು, ಉಪಾಹಾರ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಕಾರ್ಯುಕ್ರಮದ ಯಾವುದೇ ಸಂದರ್ಭದಲ್ಲಿ ಈ ಕಾರ್ಯಕ್ರಮ ಆಯೋಜಿಸಿದ ಪ್ರದೇಶದಲ್ಲಿ ಕಸಕಡ್ಡಿ, ಚಾಕಲೇಟ್ ಪೇಪರ್‌ಗಳನ್ನು ಯಾವುದು ಬೀಳದಂತೆ ಜಾಗೃತವಹಿಸಿ, ಸ್ವಚ್ಛ ಭಾರತ್ ಕಲ್ಪನೆಯನ್ನು ಈ ವಿದ್ಯಾರ್ಥಿಗಳು ಸಕಾರಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ಸಹಕಾರಿ ಕ್ಷೇತ್ರದ ಗಣ್ಯರು ಮತ್ತು ವಿಶ್ವವಿದ್ಯಾಲಯದ ಪ್ರೋಫೆಸರ್‌ಗಳು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಒಟ್ಟಿನಲ್ಲಿ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ, ವಿಶಿಷ್ಟವಾಗಿ ಮೂಡಿ ಬಂದಿರುವುದು ಬಹಳಷ್ಟು ಸಂತಸವನ್ನು ಉಂಟು ಮಾಡಿತು.

ಎಸ್.ಆರ್.ಸತೀಶ್ಚಂದ್ರ
ಅಧ್ಯಕ್ಷರು,

# ಸಹಕಾರ ಚಳುವಳಿ ಮತ್ತು ರಾಜಕೀಯ ನಿರ್ಲಿಪ್ತತೆಯ ಅಗತ್ಯತೆ

– ಶಂಕರ ಹೆಗಡೆ

**ಪೀಠಿಕೆ :**

ಸಹಕಾರವು ಸಾಮೂಹಿಕ ಜೀವನದ ಒಂದು ಆದರ್ಶ ಮಾರ್ಗ. ಜನರು ಸ್ವಯಂಪ್ರೇರಕರಾಗಿ ಪಾಲ್ಗೊಂಡು, ಪ್ರಾಮಾಣಿಕ ಸಹಭಾಗಿತ್ವದಿಂದ ದುಡಿಯುವುದು ಸಹಕಾರದ ತಿರುಳಾಗಿದೆ. 'ಪ್ರತಿಯೊಬ್ಬನಿಗಾಗಿ ಎಲ್ಲರೂ, ಮತ್ತು ಎಲ್ಲರಿಗಾಗಿ ಪ್ರತಿಯೊಬ್ಬರೂ' ದುಡಿಯಬೇಕೆಂಬುದು ಸಹಕಾರದ ಮಂತ್ರವಾಗಿದೆ. ಸಮಾಜದಲ್ಲಿ ಶ್ರೀಮಂತ ವರ್ಗದ ಜನರು ಪಡೆಯುವ ಸವಲತ್ತುಗಳನ್ನು ಮತ್ತು ಅನುಕೂಲತೆಗಳನ್ನು ಪಡೆಯಲು ದುರ್ಬಲ ವರ್ಗದ ಜನರಿಗೆ ಸಾಧ್ಯವಾಗುವುದಿಲ್ಲ. ಆದರೆ ಹಲವಾರು ಜನರು ಒಂದೇ ತತ್ವದ ಆಧಾರದ ಮೇಲೆ ಸಹಭಾಗಿಗಳಾಗಿ ಕಾರ್ಯಮಗ್ನರಾದಾಗ ಅಂತಹ ಅನುಕೂಲತೆಗಳನ್ನು ಸೃಷ್ಟಿಸಿಕೊಳ್ಳುವುದು ಸಾಧ್ಯವಿರುತ್ತದೆ. ಒಗ್ಗಟ್ಟಿನ ಮೂಲಕ ವ್ಯಕ್ತಿಗತವಾದ ಹಾಗೂ ಸಾಮೂಹಿಕ ಅಭಿವೃದ್ಧಿಯನ್ನು ಸಾಧಿಸುವುದೇ ಸಹಕಾರದ ಧ್ಯೇಯ. ಸ್ವಾವಲಂಬನೆಯ ಮುಖಾಂತರ ಪ್ರಬಲವಾದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಹಕಾರವು ಆರ್ಥಿಕ ಹಾಗೂ ಸಾಮಾಜಿಕ ರಥವಿದ್ದಂತೆ.

ಜಗತ್ತಿನಲ್ಲಿ ಪ್ರಪ್ರಥಮವಾಗಿ ಇಂಗ್ಲೆಂಡಿನಲ್ಲಿ 18ನೇ ಶತಮಾನದ ಕೊನೆಯ ಅರ್ಧದಲ್ಲಿ ಕೈಗಾರಿಕಾ ಕ್ರಾಂತಿಯು ಪ್ರಾರಂಭವಾಯಿತು. ಇದು ಕ್ರಮೇಣವಾಗಿ ಬೇರೆ ಬೇರೆ ದೇಶಗಳಿಗೂ ವ್ಯಾಪಿಸಿತು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಸಮಾಜವು ಬಂಡವಾಳಶಾಹಿ ಮತ್ತು ನಿರ್ಗತಿಕರು ಎಂಬ ಎರಡು ವರ್ಗಗಳಾಗಿ ವಿಭಜನೆಗೊಂಡವು. ಇದರಿಂದಾಗಿ ಶೋಷಣೆಯು ಕ್ರಮೇಣ ಮಿತಿಮೀರತೊಡಗಿತು. ಈ ಸಂದರ್ಭದಲ್ಲಿ ರಾಬರ್ಟ್ ಓವೆನ್ ಎಂಬ ಒಬ್ಬ ವಿಚಾರವಾದಿ ಹಾಗೂ ಸಾಮಾಜಿಕ ಕಳಕಳಿಉಳ್ಳ ಹಾಗೂ ಉತ್ತಮ ಸಮಾಜ ನಿರ್ಮಾಣದ ಕನಸನ್ನು ಕಂಡ ತತ್ವಜ್ಞಾನಿಯು ಸಹಕಾರ ಸಂಘದ ಸ್ಥಾಪನೆಗೆ ಮುಂದಾಗುತ್ತಾರೆ. ಇಂಗ್ಲೆಂಡ್‌ನ ರಾಕ್‌ಡೇಲ್ ಪಟ್ಟಣದ 28 ಜನ ನೇಕಾರರು ಪ್ರಪಂಚದಲ್ಲಿಯೇ ಪ್ರಪ್ರಥಮ ಬಾರಿಗೆ ಕಾರ್ಯಸಾಧ್ಯ ಮತ್ತು ಯಶಸ್ವಿ ಗ್ರಾಹಕ ಸಂಘವನ್ನು ಸ್ಥಾಪಿಸಿದರು. ಆದುದರಿಂದಲೇ ಇವರನ್ನು ರಾಕ್‌ಡೇಲ್ ಪಯೋನಿಯರ್ಸ್ ಅಥವಾ ರಾಕ್‌ಡೇಲ್ ಅಗ್ರಗಾಮಿಗಳು ಎಂದ ಕರೆಯಲಾಗುತ್ತದೆ. ಈ ಅಗ್ರಗಾಮಿಗಳಲ್ಲಿ ಶ್ರದ್ಧೆ, ಶ್ರಮ, ಪ್ರಾಮಾಣಿಕತೆ ಆದರ್ಶ ನಾಯಕತ್ವ ಸಾಮಾಜಿಕ ಕಳಕಳಿ ಮತ್ತು ಹೊಣೆಗಾರಿಕೆ ಇತ್ಯಾದಿ ಸರ್ವಶ್ರೇಷ್ಠ ಗುಣಗಳಿದ್ದವು. ಹೀಗಾಗಿ ಇವರುಗಳು ಜಗತ್ತಿನ ಸಹಕಾರಿಗಳಿಗೆ ಆದರ್ಶ ಪುರುಷರಾಗಿದ್ದಾರೆ.

ಈ ತತ್ವಗಳು ಬಹುಕಾಲದವರೆಗೆ ಸಹಕಾರಿ ತತ್ವಗಳಾಗಿ ಮುಂದುವರೆದವು. ಆದರೆ ಸಹಕಾರಿ ಚಳುವಳಿಯು ಜಗತ್ತಿನಾದ್ಯಂತ ಬೆಳೆಯಲು ತೊಡಗಿದಾಗ ಅವುಗಳ ಮಾರ್ಗದರ್ಶನ ಮತ್ತು ಅಭಿವೃದ್ಧಿಗಾಗಿ ಲಂಡನ್ನಿನಲ್ಲಿ 1895 ಆಗಸ್ಟ್ 19 ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ ಜನ್ಮ ತಾಳಿತು. ಇದು ಒಂದು ಸ್ವತಂತ್ರ ಸರ್ಕಾರೇತರ ರಾಜಕೀಯೇತರ ಸಂಸ್ಥೆಯಾಗಿರುತ್ತದೆ. ಈಗ ಇದರ ಕೇಂದ್ರ ಕಛೇರಿಯು ಬೆಲ್ಜಿಯಂ ರಾಷ್ಟ್ರದ ಬ್ರಿಸೆಲ್ಸ್ ಎಂಬಲ್ಲಿ ರಾಕ್‌ಡೇಲ್ ಅಗ್ರಗಾಮಿಗಳು ನೀಡಿರುವ ತತ್ವಗಳನ್ನು ಪುನರ್‌ವಿಮರ್ಶಿಸಲು ಪ್ರೊ. ಡಿ.ಜಿ.ಕರ್ವೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಐ.ಸಿ.ಎ ನೇಮಕ ಮಾಡಿತು. ರಾಕ್‌ಡೇಲ್ ಅಗ್ರಗಾಮಿಗಳ ತತ್ವಗಳಲ್ಲಿ ಮಾರ್ಪಾಟು ಮಾಡಿ 6 ತತ್ವಗಳನ್ನು ಶಿಫಾರಸ್ಸು ಮಾಡಿತು. 1995 ರಲ್ಲಿ ಐ.ಸಿ.ಎ ಯು ಸಾಮಾಜಿಕ ಕಳಕಳಿ ಎಂಬ ತತ್ವವನ್ನು ಸೇರ್ಪಡೆ ಮಾಡಿತು.

ಈ ಹಿನ್ನಲೆಯಲ್ಲಿ ಇಂದು ನಾವು ಸಹಕಾರ ಚಳುವಳಿಯ ಆಗುಹೋಗುಗಳನ್ನು ವಿಮರ್ಷಿಸಿಕೊಂಡಾಗ ರಾಜಕೀಯ ಹಾಗೂ ಜಾತಿಯ ತತ್ವಗಳು ಸಹಕಾರ ಚಳುವಳಿಯಲ್ಲಿ ಹೆಚ್ಚು ಹೆಚ್ಚಾಗಿ ನುಸುಳಿಕೊಂಡು ಸಹಕಾರ ಮೌಲ್ಯಗಳಿಗೆ ಅಪಚಾರ ತರುತ್ತಿರುವುದು ಆತಂಕಕಾರಿ ವಿಷಯ. ಸಹಕಾರ ಸಂಘಗಳ ನಿರ್ವಹಣೆಯಲ್ಲಿ ಧಾರ್ಮಿಕತೆ ಮತ್ತು ರಾಜಕೀಯ ಎಂದೂ ಬರಬಾರದು. ರಾಜಕೀಯದಲ್ಲಿ ಸಹಕಾರ ಬೇಕು ಆದರೆ ಸಹಕಾರದಲ್ಲಿ ರಾಜಕೀಯ ಬೇಡ ಎಂಬುದು ಇತ್ತೀಚಿನ ಘೋಷಣೆಯಾಗಿದ್ದರೂ ಸಹ ಸಹಕಾರ ಸಂಘಗಳ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಬೆಂಬಲಿತ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಅಧಿಕಾರದ ಗದ್ದುಗೆಯನ್ನು ಹಿಡಿಯಲು ಪ್ರಯತ್ನಿಸುತ್ತಿರುವುದು ರಾಜಕೀಯ ನಿರ್ಲಿಪ್ತತೆಗೆ ಅಪಚಾರವೇ ಸರಿ. ಇಂಗ್ಲೆಂಡ್ ದೇಶದ ಪಾರ್ಲಿಮೆಂಟಿನಲ್ಲಿ 'ಸಹಕಾರಿ ಪಕ್ಷ' ಎಂಬ ರಾಜಕೀಯ ಪಕ್ಷ ಇರುತ್ತದೆ. ಇದು ಜಗತ್ತಿನಲ್ಲಿಯೇ ಇಂಗ್ಲೇಂಡಿನಲ್ಲಿಯೇ ಮಾತ್ರ ಸಹಕಾರಿ ಪಕ್ಷವೆಂಬ ರಾಜಕೀಯ ಪಕ್ಷವಿರುವುದು ಉಲ್ಲೇಖನೀಯ. ಆದರೆ ಆ ಪಕ್ಷದ ಸಂಸತ್ ಸದಸ್ಯರು ಸಹಕಾರಿ ಚಳುವಳಿಯ ಬಗ್ಗೆ ಸಂಸತ್ತಿನಲ್ಲಿ ಸಹಕಾರಿ ಚಳುವಳಿಯ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಸಹಕಾರಿ ಲಾಭಿಯನ್ನು ಉಂಟು ಮಾಡಲು ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸಹಕಾರ ಚಳುವಳಿಯಲ್ಲಿ ನಿಷ್ಠೆ ಹಾಗೂ ಪ್ರಾಮಾಣಿಕತೆ ಕಳಕಳಿ ಉಳ್ಳ ಸಹಕಾರಿ ನಾಯಕರು ಈ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ಬರಬೇಕು ಮತ್ತು ತಮ್ಮ ರಾಜಕೀಯ ಪಕ್ಷಭೇದವನ್ನು ಮರೆತು ಸಹಕಾರಿ ಸಂಘಗಳನ್ನು ತತ್ವ ಹಾಗೂ ಸಿದ್ಧಾಂತಗಳ ಅಡಿಯಲ್ಲಿ ನಡೆಸಿದರೆ ಸಹಕಾರ ಚಳುವಳಿ ಇನ್ನೂ ಬಲಿಷ್ಠವಾಗಿ ಹಾಗೂ ತನ್ನ ಉದ್ದೇಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯ.

# Ten Ways To Be Professional at Work

- **Bhaskar Hegde Kageri**

We often hear how important it to behave "professionally" in the workplace. If you want to get ahead, be taken seriously, and have your Management think of you as an asset to the team, doing things in a professional way is vital.

But what exactly do employers mean by this term? Surely it's enough to do your job well and show up on time consistently. Or are there other things expected of you if you want to be viewed as being professional?

## 10 Ways To Be Professional :

Acting like a professional really means doing what it takes to make others think of you as reliable, respectful, and competent. Depending on where you work and the type of job you have, this can take on many different forms.

There are, however, quite a few common traits when it comes to being professional. This includes the following:

**1. Competence. :** You're good at what you do – and you have the skills and knowledge that enable you to do your job well.

**2. Reliability :** People can depend on you to show up on time, submit your work when it's supposed to be ready, etc.

**3. Honesty :** You tell the truth and are upfront about where things stand.

**4. Integrity :** You are known for your consistent principles.

**5. Respect For Others :** Treating all people as if they mattered is part of your approach.

**6. Self-Upgrading :** Rather than letting your skills or knowledge become outdated, you seek out ways of staying current.

**7. Being Positive :** No one likes a constant pessimist. Having an upbeat attitude and trying to be a problem-solver makes a big difference.

**8. Supporting Others :** You share the spotlight with colleagues, take time to show others how to do things properly, and lend an ear when necessary.

**9. Staying Work-Focused :** Not letting your private life needlessly have an impact on your job, and not spending time at work attending to personal matters.

**10. Listening Carefully :** People want to be heard, so you give people a chance to explain their ideas properly.

## The Professional Advantage :

The more you put into practice the 10 points listed above, the better your chances will be to create a positive reputation for yourself. This can ultimately translate into raises and promotions, chances to work on more assignments that you enjoy, less likelihood of being downsized when layoffs are being considered, and the respect of peers and senior management.

You also benefit from feelings of increased self-worth and dignity. Plus you keep yourself marketable for the future. All in all, some very good reasons to as professional as possible.

## Avoid Being Unprofessional :

Your employer may not tell you exactly their own view of what being professional means. But we all know from experience how to get labelled as "unprofessional." By finishing tasks or projects late, for instance. Being unprepared when attending meetings. Spending time gossiping at work.

Other ways to be seen as unprofessional? Treat people with disrespect. Keep them waiting unnecessarily. Steal their thunder by using their ideas without giving them credit. Say one thing then do the complete opposite. Break promises regularly.

# RBI NEWS - JUNE 2019

**K. Vittal Shetty, Banking consultant, Kohimavittal@Hotmail.com, Mobile : 9845699904**

**Jun 06, 2019: -** Second Bi-monthly Monetary Policy Statement, 2019-20 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation, the Monetary Policy Committee (MPC) at its meeting today decided to:

- reduce the policy repo rate under the liquidity adjustment facility (LAF) by 25 basis points to 5.75 per cent from 6.0 per cent with immediate effect.

Consequently, the reverse repo rate under the LAF stands adjusted to 5.50 per cent, and the marginal standing facility (MSF) rate and the Bank Rate to 6.0 per cent.

The MPC also decided to change the stance of monetary policy from neutral to accommodative.

These decisions are in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

**The next meeting of the MPC is scheduled during August 5 to 7, 2019.**

| **Policy Rates. Effective from June 06, 2019** | **%** |
|---|---|
| Policy Repo Rate | 5.75% |
| Reverse Repo Rate | 5.50% |
| Marginal Standing Facility Rate | 6.00% |
| BANK RATE | 6.00% |
| RESERVE RATIOS | |
| Cash Reserve Ratio. (CRR) | 4.00% |
| Statutory Reserve Ratio. (SLR). Effective from April 13,2019 | 19.00% |

**Jun 19, 2019**

**Scheduled Banks' Statement of Position in India as on Friday June 7, 2019**

(Amount in Billions of ₹)

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| 08-JUN-2018 | | 24-MAY-2019 * | 07-JUN-2019 * | 08-JUN-2018 | 24-MAY-2019 * | 07-JUN-2019 * | |
| I | a) Deposits | 114083.49 | 124995.58 | 125402.33 | 117082.11 | 128280.52 | 128705.50 |
| | i) Demand | 11621.79 | 13130.9 | 12928.01 | 11905.31 | 13427.44 | 13234.87 |
| | ii) Time | 102461.7 | 111864.65 | 112474.4 | 105176.8 | 114853.05 | 115470.7 |
| II | INVESTMENTS | 34457.36 | 35219.01 | 34973.09 | 35399.27 | 36146.23 | 35901.34 |
| III | BANK CREDIT | 85938.45 | 96215.5 | 96519.24 | 88507.07 | 99063.19 | 99374.86 |

**IMPORTANT NEWS.**

**1). June 10, 2019: -**Financial Inclusion- Access to Banking Services – Basic Savings Bank Deposit Account (BSBDA)

Refer RBI circular DBOD.No.Leg.BC.35/09.07.005/2012-13 dated August 10, 2012 on the captioned subject.

The Basic Savings Bank Deposit (BSBD) Account was designed as a savings account which will offer certain minimum facilities, free of charge, to the holders of such accounts. In the interest of better customer service, it has been decided to make certain changes in the facilities associated with the account. Banks are now advised to offer the following basic minimum facilities in the BSBD Account, free of charge, without any requirement of minimum balance.

i. The deposit of cash at the bank branch as well as ATMs/ CDMs

ii. Receipt/ credit of money through any electronic channel or by means of deposit /collection of cheques drawn by Central/State Government agencies and departments

iii. No limit on number and value of deposits that can be made in a month

iv. Minimum of four withdrawals in a month, including ATM withdrawals

v. ATM Card or ATM-cum-Debit Card

The BSBD Account shall be considered a normal banking service available to all.

Banks are free to provide additional value-added services, including issue of cheque book, beyond the above minimum facilities, which may/may not be priced (in non-discriminatory manner) subject to disclosure. The availment of such additional services shall be at the option of the customers. However, while offering such additional services, banks shall not require the customer to maintain a minimum balance. Offering such additional services will not make it a non-BSBD Account, so long as the prescribed minimum services are provided free of charge.

The holders of BSBD Account will not be eligible for opening any other savings bank deposit account in that bank. If a customer has any other existing savings bank deposit account in that bank, he/she will be required to close it within 30 days from the date of opening a BSBD Account. Further, before opening a BSBD account, a bank should take a declaration from the customer that he/she is not having a BSBD account in any other bank.

The BSBD Account shall be subject to RBI instructions on KYC/AML for opening of bank accounts.

The instructions issued on free transactions available for a normal savings bank account in own-bank/other bank ATMs.

These instructions will come into force with effect from July 1, 2019. Banks are advised to frame Board approved policy/ operational guidelines in this regard.

**2). Jun 11, 2019: -** Committee to Review the ATM Interchange Fee Structure

It was announced in the Part 'B' of the Second Bi-Monthly Monetary Policy for the year 2019-20 on June 6, 2019 that the Reserve Bank of India will constitute a Committee to Review the ATM Interchange Fee Structure with a view to give a fillip to the ATM deployment in the unbanked areas.

Accordingly, the Reserve Bank of India has constituted a Committee to examine the entire gamut of ATM charges and fees. The composition of the Committee is as under:

| | | |
|---|---|---|
| 1 | Shri V. G. Kannan<br>Chief Executive, Indian Banks' Association | Chairperson |
| 2 | Shri Dilip Asbe<br>Chief Executive Officer, National Payments Corporation of India | Member |
| 3 | Shri Giri Kumar Nair<br>Chief General Manager, State Bank of India | Member |

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 36

| | | |
|---|---|---|
| 4 | Shri S Sampath Kumar<br>Group Head, Liability Products, HDFC Bank Ltd. | Member |
| 5 | Shri K Srinivas<br>Director, Confederation of ATM Industry | Member |
| 6 | Shri Sanjeev Patel<br>Chief Executive Officer, Tata Communications Payment Solutions Ltd. | Member |

**The Terms of Reference of the Committee are as under:**

a. To review the existing structures and patterns of costs, charges and interchange fees for ATM transactions;

b. To review the overall patterns of usage of ATMs by cardholders and assess the impact, if any, on charges and interchange fees;

c. To assess the entire gamut of costs in respect of the ATM ecosystem;

d. To make recommendations on the optimal charge/ interchange fee structure and pattern; and

e. Any other item relevant to the above.

The Committee may submit its report within two months from the date of its first meeting.

**3). June 11, 2019: -** National Electronic Funds Transfer (NEFT) and Real Time Gross Settlement (RTGS) systems – Waiver of charges

The Reserve Bank has since reviewed the various charges levied by it on the member banks for transactions processed in the RTGS and NEFT systems. In order to provide an impetus to digital funds movement, it has been decided that with effect from July 1, 2019, processing charges and time varying charges levied on banks by Reserve Bank of India (RBI) for outward transactions undertaken using the RTGS system, as also the processing charges levied by RBI for transactions processed in NEFT system will be waived by the Reserve Bank.

The banks are advised to pass on the benefits to their customers for undertaking transactions using the RTGS and NEFT systems with effect from July 1, 2019.

**4). Jun 26, 2019: -** Public can continue to accept all the coins as legal tender: RBI

RBI puts into circulation coins minted by the Government of India. These coins have distinctive features. Coins in new denominations to meet transaction needs of public and coins in new designs to reflect various themes - economic, social and cultural - are introduced from time to time. As coins remain in circulation for a longer period, coins of different designs and sizes circulate at the same time. Presently, coins of 50 paise, ₹ 1/-, 2/-, 5/- and 10/- denomination of various sizes, theme and design are in circulation.

It is reported that there are doubts in some quarters, regarding the genuineness of such coins which has resulted in reluctance on the part of some traders, shop-keepers and members of public to accept coins. This has impeded the free use and circulation of coins in certain pockets of the country.

The Reserve Bank appeals to members of the public not to give credence to such rumours and continue to accept these coins as legal tender in all their transactions without any hesitation.

The Reserve Bank of India has separately reiterated its instructions to banks to accept coins for transactions and exchange at all their branches.

**Source: www.rbi.org.in**

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ-585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010